ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಮಾರ್ಚ್ 2019 ಮಾಸ ಪತ್ರಿಕೆ

ಸಂಪುಟ/Volume : 41
ಸಂಚಿಕೆ/Issue : 6
ಪುಟ/Pages : 12
ಬೆಲೆ/Price : ₹ 10/–

Akhila Karnataka Shikshaka Samachar | March 2019 | Monthly






A Journal of Karnataka State Secondary Teachers' Association

# ಸಂಪಾದಕೀಯ

## ಗುಣಗಳ ಗಣಿಯಾಗಿರಬೇಕು ನಾಯಕ

**ಮುಖಿಯಾ ಮುಖ ಸೊ ಚಾಹಿಎ ಖಾನ ಪಾನ ಕೊ ಏಕ**
**ಪಾಲಇ ಪೊಷಇ ಸಕಲ ಅಂಗ ತುಲಸೀ ಸಹಿತ ವಿವೇಕ ॥**

ತುಳಸೀದಾಸರ ಈ ದೋಹೆಯೊಂದರಿಂದಲೇ ನಾಯಕನು ಹೇಗಿರಬೇಕು ಎಂಬುದನ್ನು ಅರಿಯಬಹುದು. ಈ ಮೇಲಿನ ದೋಹೆ(ಎರಡು ಸಾಲಿನ ಪದ್ಯ) ಹಿಂದಿ ಭಾಷೆಯಲ್ಲಿರುವುದರಿಂದ ಇದರ ಅರ್ಥವನ್ನು ನಾನೊಮ್ಮೆ ಹೇಳಲು ಬಯಸುತ್ತೇನೆ.

ನಾಯಕನೆಂಬುವವನು ಬಾಯಿಯಂತಿರಬೇಕು. ತಿನ್ನುವ, ಕುಡಿಯುವ ಕೆಲಸ ಬಾಯಿಯೊಂದರಿಂದಲೇ ಆದರೂ, ಅದು ಇಡೀ ದೇಹದ ಪಾಲನೆ, ಪೋಷಣೆಯನ್ನು ಮಾಡುತ್ತದೆ. ಕೆಲವೊಮ್ಮೆ ಬಾಯಿಗೆ ನಾವು ಸಿಹಿಯ ರುಚಿಯನ್ನು, ಮೃಷ್ಟಾನ್ನ ಭೋಜನ ನೀಡಿದರೂ, ದೇಹಕ್ಕೆ ಏನಾದರೂ ತೊಂದರೆಯಾದಾಗ ಕಹಿಯಾದ ಔಷಧಿಯನ್ನು ಸಹ ನೀಡುತ್ತೇವೆ. ಕೇವಲ ದೇಹದ ಪಾಲನೆ–ಪೋಷಣೆಗೋಸ್ಕರ ಬಾಯಿ ಕಹಿಯಾದ ಔಷಧಿಯನ್ನೂ ಸ್ವೀಕರಿಸಿ ತನ್ನ ಕರ್ತವ್ಯವನ್ನು ಶಿರಸಾವಹಿಸಿ ಪಾಲಿಸುತ್ತದೆ.

ನಾಯಕತ್ವ ಕೇವಲ ಮಾತುಗಳ ಮೂಲಕ ತೋರಿಸುವುದಲ್ಲ, ಅದನ್ನು ಕ್ರಿಯೆ ಮತ್ತು ದೃಷ್ಟಿಕೋನದಲ್ಲಿ ತೋರಿಸಬೇಕು. ಕಾಡಿನಲ್ಲಿರುವ ಎಲ್ಲಾ ಪ್ರಾಣಿಗಳು ಮೃಗರಾಜನೆಂದೆನಿಸಿಕೊಳ್ಳಲು ಸಾಧ್ಯವಿಲ್ಲ. ಹಾಗೆಯೇ ಕಾಡಿನ ಅನೇಕ ಸಣ್ಣ–ಪುಟ್ಟ ಪ್ರಾಣಿಗಳು ಸೇರಿಕೊಂಡರೂ ಮೃಗರಾಜನೆಂಬ ಹೆಸರು ಪಡೆದುಕೊಳ್ಳಲು ಸಾಧ್ಯವಿಲ್ಲ. ಹಾಗೆಯೇ ಪ್ರತಿಯೊಬ್ಬ ಪ್ರಜೆಯೂ ಸಮರ್ಥನಾಯಕನೆನಿಸಿಕೊಳ್ಳಲು ಸಾಧ್ಯವಿಲ್ಲ. ಸಿಂಹವೂ ತನ್ನ ಗಾಂಭೀರ್ಯ, ಸಾಹಸ, ಧೈರ್ಯ, ಘರ್ಜನೆಯಿಂದಲೇ ಮೃಗರಾಜನೆನಿಸಿರುವುದು. ಹಾಗೆಯೇ ನಾಯಕನಾದವನಿಗೆ ಗಾಂಭೀರ್ಯ, ಸಹನೆ, ಮುಂದಾಳತ್ವ, ಘರ್ಜನೆ, ಸಮಯಕ್ಕೆ ಸರಿಯಾದ ನಿರ್ಧಾರ, ದಿಟ್ಟಹೆಜ್ಜೆ, ಸಮಸ್ಯೆಗಳನ್ನು ಎದುರಿಸುವ ತಾಕತ್ತು, ಪ್ರಜೆಗಳ ಅಂತರಾಳವನ್ನು ಅರಿಯುವ ಮನಸ್ಸು, ಪ್ರಜೆಗಳ ರಕ್ಷಣೆಯ ಜವಾಬ್ದಾರಿ, ನೆರೆಹೊರೆಯವರೊಂದಿಗೆ ಹೊಂದಾಣಿಕೆ, ಒಳ್ಳೆಯ ವ್ಯಕ್ತಿತ್ವ, ನುಡಿಯಂತೆ ನಡೆ, ಪ್ರಜೆಗಳ ರಕ್ಷಣೆಗಾಗಿ ತನ್ನ ಜೀವನವನ್ನೇ ಮುಡಿಪಾಗಿಡುವ ಮನೋಭಾವವಿರಬೇಕು. ಕಷ್ಟದ ಸಮಯದಲ್ಲಿ ಬೇರೆಯವರ ಮುಂದೆ ಸಹಾಯಕ್ಕಾಗಿ ಮಂಡಿಯೂರಿ ಅಸಹಾಯಕರಾಗಿ ಕುಳಿತುಕೊಳ್ಳದೇ, ದಿಟ್ಟ ನಿರ್ಧಾರಗಳನ್ನು ತೆಗೆದುಕೊಂಡು ದೇಶವನ್ನು ಮುನ್ನೆಡೆಸುವ, ಸಮಸ್ಯೆಗೆ ಪರಿಹಾರ, ಸಮಸ್ಯೆಗೊಂದು ನಿರುತ್ತರ ನೀಡುವ ತಾಕತ್ತಿರಬೇಕು. (ದಿನಾಂಕ 26.11.18ರ ತಾಜ್ ಹೋಟೆಲ್ಲಿನ ಮೇಲೆ ನಡೆದ ದಾಳಿ ಹಾಗೂ ದಿನಾಂಕ 14.02.19 ರ ಪುಲ್ವಾಮ ದಾಳಿಯನ್ನೇ ಹೋಲಿಕೆ ಮಾಡಿಕೊಂಡರೆ ಸಾಕು).

**ಆತ್ಮೌಪಮ್ಯೇನ ಸರ್ವತ್ರ ಸಮಂ ಪಶ್ಯತಿ ಯೋಽರ್ಜುನ ।**
**ಸುಖಂ ವಾ ಯದಿ ದುಃಖ ಸ ಯೋಗೀ ಪರಮೋ ಮತಃ ॥ (ಅಧ್ಯಾಯ 06,32)**

ಓ ಅರ್ಜುನಾ, ಸುಖವಿರಲಿ, ದುಃಖವಿರಲಿ ಎಲ್ಲರ ಬೇಕು ಬೇಡಗಳನ್ನು ತನ್ನ ಹಾಗೆ ಸಮಾನತೆಯಿಂದ ಕಾಣುವವನು ಬಹಳ ದೊಡ್ಡ ಸಾಧಕನೆನಿಸಿಕೊಳ್ಳುತ್ತಾನೆ. (ಇಲ್ಲಿ ನಾವು "ಸಾಧಕ" ಎಂಬ ಪದದ ಬದಲಾಗಿ "ನಾಯಕ" ನೆಂದುಕೊಂಡರೆ ತಪ್ಪಾಗಲಾರದು)

130 ಕೋಟಿ ಜನರ ನಾಯಕನೆನಿಸಿಕೊಳ್ಳವುದು ಇನ್ನೊಬ್ಬರ ಹಿಂದೆ ಕೈಕಟ್ಟಿನಿಂತುಕೊಂಡು ಅವರ ಆಜ್ಞೆಗಳಿಗೆ ತಲೆಯಾಡಿಸುವಷ್ಟು ಸುಲಭದ ಮಾತಲ್ಲ. ದೇಶ–ವಿದೇಶದ ನಾಯಕರು ತಮ್ಮನ್ನೇ ಸುತ್ತುವರಿದು ತಮ್ಮ ಮಾತುಗಳನ್ನು ಗಮನವಿಟ್ಟು ಆಲಿಸುವಂತೆ ಮಾಡುವುದು.

ಶ್ರೀ ರಾಮಚಂದ್ರ 14 ವರ್ಷಗಳ ವನವಾಸದಲ್ಲಿದ್ದರೂ ಆಯೋಧ್ಯೆಯ ಪ್ರಜೆಗಳ ಬಗ್ಗೆಯೇ ಯೋಚಿಸುತ್ತಿದ್ದಂತೆ ದಿನದ 8 ಪಹರೆಗಳಲ್ಲಿಯೂ ಪ್ರಜೆಗಳ ಯೋಗಕ್ಷೇಮದ ಬಗ್ಗೆ ಚಿಂತಿಸುವವನೇ ನಾಯಕನೆನಿಸುಕೊಳ್ಳಲು ಸಾಧ್ಯ.

**ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।**
**ಅಭ್ಯುತ್ಥಾನ ಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ॥**
**ಪರಿತ್ರಾಣಾಯ ಸಾಧೂನಾಂ ವಿನಾಶಯ ಚ ದುಷ್ಕೃತಾಂ ।**
**ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ ॥**

ಯಾವಾಗ ಧರ್ಮದ ಅವನತಿಯಾಗುವುದೋ, ಅಧರ್ಮದ ಉನ್ನತಿಯಾಗುವುದೋ ಆಗ ನಾನು ಅವತಾರ ಎತ್ತುತ್ತೇನೆ. ಸಾಧುಗಳ ರಕ್ಷಣೆಗಾಗಿ, ದುಷ್ಟರ ವಿನಾಶಕ್ಕಾಗಿ ಮತ್ತು ಧರ್ಮದ ಸಂಸ್ಥಾಪನೆಗಾಗಿ ಪ್ರತಿಯುಗದಲ್ಲೂ ಅವತರಿಸುತ್ತೇನೆ. –ಭಗವಾನ್ ಶ್ರೀ ಕೃಷ್ಣ, ಭಗವದ್ಗೀತೆ

ಹೀಗೆ ಧರ್ಮದ ಉನ್ನತಿಗಾಗಿ, ಅಧರ್ಮದ ಅವನತಿಗಾಗಿ, ಸಾಧುಗಳ ರಕ್ಷಣೆಗಾಗಿ, ದುಷ್ಟರ ವಿನಾಶಕ್ಕಾಗಿ ಮತ್ತು ಧರ್ಮ ಸಂಸ್ಥಾಪನೆಗಾಗಿ ಎಲ್ಲರೂ ಸೇರಿ ಒಬ್ಬ ಯುಗಪುರುಷನನ್ನು ಆಯ್ಕೆ ಮಾಡುವುದು ಅನಿವಾರ್ಯವಾಗಿದೆ.

ಪರಿವರ್ತನೆಯಾಗಬೇಕೆಂದರೆ ಪ್ರತಿಯೊಬ್ಬರೂ ಕೈ ಜೋಡಿಸಬೇಕು. ಅಂತಿಮವಾಗಿ (ಮತದಾನವೆಂಬ) ಅಳಿಲು ಸೇವೆಯೂ ಲೆಕ್ಕಕ್ಕೆ ಬರುತ್ತದೆ. ತಿಳಿವಷ್ಟೇ ಸಾಕಾಗದು, ಅದನ್ನು ಅನ್ವಯಿಸ ಬೇಕು, ಸಂಕಲ್ಪವೊಂದೇ ಸಾಲದು, ಕೆಲಸ ಮಾಡಬೇಕೆಂಬುದನ್ನು ನಾವೆಲ್ಲರೂ ನೆನಪಿಡಬೇಕು.

ಇದನ್ನೆಲ್ಲಾ ಓದಿದ ಮೇಲೆ ನನ್ನ ಜಾಣ ಓದುಗರು ಒಂದು ನಿರ್ಧಾರಕ್ಕೆ ಬಂದಿರುತ್ತೀರೆಂದು ನಾನು ತಿಳಿದಿದ್ದೇನೆ. ಬನ್ನಿ ರಾಷ್ಟ್ರಕ್ಕೆ ಗುಣಗಳ ಗಣಿಯಾಗಿರುವ ನಾಯಕನನ್ನು ಚುನಾಯಿಸೋಣ. ರಾಷ್ಟ್ರ ನಿರ್ಮಾಣದಲ್ಲಿ ನಮ್ಮ ಅಳಿಲು ಸೇವೆಯನ್ನು ಮಾಡೋಣ.

ಸಂಪಾದಕ

## ಸೂಕ್ತಿ



ತ್ಯಾಗಬುದ್ಧಿಯಲಿ, ನಿರ್ವೇಗದಲಿ, ತಪದಲ್ಲಿ,
ಸಂಯಮದ ಸೌಂದರ್ಯದಲ್ಲಿ,
ನಿರಸೂಯೆಯಲಿ,
ರಸಕಾವ್ಯ ಸತ್ಕಲಾಭ್ಯಾಸದಧ್ಯಾತ್ಮದಲಿ,
ಸೋದರ ಪ್ರೀತಿಯಲಿ,
ಬಾಲಋಷಿಯೆಂಬಂತೆ
ಭಾಜನನಾಗಿ ರಾಮಗೌರವಕೆ.

- ಕುವೆಂಪು, ರಾಮಾಯಣದರ್ಶನಂ

## ಪರಿವಿಡಿ


- ನಭ ಸ್ಪರ್ಶಂ ದೀಪ್ತಂ 3
- ಭಾರತದ ಇಂದಿನ ಪರಿಸ್ಥಿತಿಯಲ್ಲಿ ಸಂಘಟಿತ ಶಕ್ತಿಯ ಅಗತ್ಯ 5
- ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಪಾತ್ರ 6
- ಮೌಲ್ಯಮಾಪನ, ಶಿಕ್ಷಕರೇ ಸ್ವಲ್ಪ ಗಮನಿಸಿ! 7
- ಯುಗಾದಿ ಹಬ್ಬಕ್ಕೆ ಸ್ವಾಗತ 8
- ನೋಟಾ (NOTA) ದೆಡೆಗೆ ಒಂದು ನೋಟ 11
- ಚುನಾವಣೆಯ ಹೊಸ್ತಿಲಲ್ಲಿ : ನಾನು ಶಿಕ್ಷಕ 12

# ನಭ ಸ್ಪರ್ಶಂ ದೀಪ್ತಂ



ದಾಳಿ ಮಾಡುವುದು ಮಿರಾಜ್ ಯುದ್ಧ ವಿಮಾನಗಳು. ಅವುಗಳು ಮರಳಿದಾಗ ಶತ್ರುಗಳ ವಿಮಾನಗಳು ಏನಾದರೂ ಹಿಂಬಾಲಿಸುತ್ತಾ ಬಂದಿದ್ದರೆ ಅವುಗಳನ್ನು ವಿಚಾರಿಸಿಕೊಳ್ಳುವುದು ಸುಖೋಯ್–30 ವಿಮಾನಗಳ ಜವಾಬ್ದಾರಿ. ಇಂತಹ ದಾಳಿಗೆ ಪೂರಕ ನೆರವು ನೀಡುವ ಇನ್ನಿತರ ವಿಮಾನಗಳು ಹಾಗೂ ತಾಂತ್ರಿಕ ಸೌಲಭ್ಯಗಳೂ ಇವೆ... ಇವೆಲ್ಲ ಜತೆಗೂಡಿದರೇನೇ ಯಶಸ್ವೀ ಕಾರ್ಯಾಚರಣೆಯೊಂದು ಪೂರ್ಣಗೊಳ್ಳುವುದು.

ಪಾಕಿಸ್ತಾನದ ಬಾಲಾಕೋಟಿನ ಪ್ರದೇಶದಲ್ಲಿರುವ ಜೈಷ್ ಉಗ್ರರ ತರಬೇತಿ ಕೇಂದ್ರದ ಮೇಲೆ ಭಾರತೀಯ ವಾಯುಸೇನೆಯ 12 ಮಿರಾಜ್–2000 ಯುದ್ಧ ವಿಮಾನಗಳು ದಾಳಿ ನಡೆಸಿ ಉಗ್ರರನ್ನು ಮತ್ತು ಅವರ ತರಬೇತಿ ವ್ಯವಸ್ಥೆಯನ್ನು ಧೂಳಿಪಟ ಮಾಡಿ ಸುರಕ್ಷಿತವಾಗಿ ಮರಳಿ ಬಂದ ವಾಯುಪಡೆಯ ಈ ಅಪ್ರತಿಮ ಸಾಹಸಕ್ಕೆ ಪ್ರತಿಕ್ರಿಯಿಸುತ್ತಾ ಪಾಕಿಸ್ತಾನದ ರಕ್ಷಣಾ ಮಂತ್ರಿ ಪರವೇಜ್ ಖಾಟಕ್ ಹೇಳಿದ್ದು ಹೀಗೆ...

"ನಮ್ಮ ವಾಯುಪಡೆಯೂ ತಯಾರಿತ್ತು. ಆದರೆ ಏನು ಮಾಡೋದು ತುಂಬಾ ಕತ್ತಲಾಗಿತ್ತು..."

ಅವರ ಈ ಹೇಳಿಕೆಯ ಹಿನ್ನೆಲೆಯಲ್ಲಿ ಅರ್ಥವಾಗುತ್ತದೆ ಪಾಕಿಸ್ತಾನದ ಸೇನೆಗಳ ದಾರ್ಢ್ಯತೆ.

ವಾಸ್ತವವಾಗಿ ಏನಾಗಿತ್ತೆಂದರೆ ಭಾರತೀಯ ವಾಯುಸೇನೆಯ ಫೈಟರ್ ಪ್ಲೇನ್‌ಗಳು ಪಾಕಿಸ್ತಾನದ ಗಡಿಯೊಳಗೆ ಆಕ್ರಮಣ ಮಾಡುತ್ತಿದ್ದಾವೆ ಎನ್ನುವ ಸೂಚನೆ ಪಾಕಿಸ್ತಾನದ ರಡಾರುಗಳಿಗೆ ಸಿಕ್ಕಿದೆ. ನಿದ್ದೆಯಿಂದ, ಆಘಾತದಿಂದ ಕಣ್ಣುಜ್ಜುತ್ತಲೇ... ಸ್ಕ್ಯಾಂಬಲ್... ಸ್ಕ್ಯಾಂಬಲ್ ಎಂದು ಬಡಬಡಿಸುತ್ತಲೇ ಪಾಕಿಸ್ತಾನದ ವಾಯುದಳದ ಈ 16 ಫೈಟರ್ ವಿಮಾನಗಳು ಸೂಚನೆ ಬಂದ ದಿಕ್ಕಿನಲ್ಲಿ ಹೊರಟಿದೆ. ಆದರೆ ಅವರಿಗೆ ರಡಾರಿನಲ್ಲಿ ಕಂಡ ದೃಶ್ಯ ಅವರ ಜಂಘಾಬಲವನ್ನೇ ಅಡಗಿಸಿ ಬಿಟ್ಟಿದೆ. ಪಾಕಿಸ್ತಾನದ ಗಡಿಯೊಳಗೆ ಭಾರತದ 12 ಮಿರಾಜ್ ವಿಮಾನಗಳು ಕಂಡುಬಂದರೆ, ಅದರ ಜತೆಗೇ ಆ ವಿಮಾನಗಳ ರಕ್ಷಣೆಗೆ, ಕಾವಲಿಗೆಂದು ಗಡಿಯ ಸಮೀಪ ಭಾರತದ ಆಕಾಶದಲ್ಲಿ ಅರ್ಧಕ್ಕರ್ಧ ವಾಯುಸೇನೆಯ ವಿಮಾನಗಳ ಸಾಲು ಸಾಲು... ಪಾಕಿಸ್ತಾನದ ಪೈಲಟ್‌ಗಳಿಗೆ ಇದನ್ನು ನೋಡಿ ತಲೆ ಬೌಳು ಬಂದಿರಬೇಕು, ಕಣ್ಣು ಕಪ್ಪಿಟ್ಟಿರಬಹುದು. ಹಾಗಾಗಿ ಈ ರಾತ್ರಿಯಲ್ಲಿ ಏನೂ ಮಾಡೋದು ಬೇಡ ಸದ್ಯಕ್ಕೆ ವಾಪಸು ಹೋಗಿ, ತಾವು ಕಂಡಿದ್ದನ್ನು ರಕ್ಷಣಾ ಮಂತ್ರಿಗೆ ವರದಿ ಮಾಡಿದ್ದಾರೆ. ಹಾಗಾಗಿ ಪ್ರೆಸ್ ಮೀಟ್ ನಡೆದ ಸಂದರ್ಭದಲ್ಲಿ... ತುಂಬಾ ಕತ್ತಲಾಗಿತ್ತು ಎನ್ನುವ ಹೇಳಿಕೆಯನ್ನು ರಕ್ಷಣಾ ಮಂತ್ರಿ ಕೊಟ್ಟರು ಎಂದು ಅನಿಸುತ್ತದೆ.

**ಆಪರೇಶನ್ ಜೈಷ್**

ಮುಂದೊಮ್ಮೆ ಇದೇ ಹೆಸರಿನ ಒಂದು ಚಲನಚಿತ್ರವೂ ಬರಬಹುದು. ಯಾರು ಇಂತಹ ಚಲನಚಿತ್ರದ ನಿರ್ದೇಶನ ಮಾಡುತ್ತಾರೋ ಗೊತ್ತಿಲ್ಲ. ಆದರೆ ಮೊನ್ನೆ ಪಾಕಿಸ್ತಾನದ ಮೇಲೆ ನಡೆದ ವಾಯುಪ್ರಹಾರದ ದಾಳಿಯಲ್ಲಿ 12 ಮಿರಾಜ್–2000 ಫೈಟರ್ ವಿಮಾನಗಳು ಮುಖ್ಯ ನಾಯಕರುಗಳಾದರೆ ಅವುಗಳ ನಿರ್ದೇಶಕ EMB 1451 ಎನ್ನುವ ವಿಮಾನ.

ಈ ವಿಮಾನಕ್ಕೆ Eye in the sky ಅಂದರೆ, ಗಗನದಲ್ಲಿ ಚಕ್ಷು ಎನ್ನುತ್ತಾರೆ. ಹಾಗಾಗಿ ಇದರ ಹೆಸರು 'ನೇತ್ರಾ' ಎಂದು, Airborne Early Warning and Controlling (AEW&C) ಎನ್ನುವ ತಾಂತ್ರಿಕ ಪದಬಳಕೆ ಇದರ ಬಹುಮುಖ ಪ್ರತಿಭೆಯನ್ನು ಸಂಪೂರ್ಣವಾಗಿ ಸಾರಿ ಹೇಳಲಾರದು. ಇದರ ಮಹತ್ವ ಇನ್ನೂ ಸುದೀರ್ಘವಾದುದ್ದು.

ಅರ್ಜಂಟೈನಾದ ದೇಹವಾದರೂ ಇದರ ಮೆದುಳು, ಹೃದಯ ಮತ್ತಿತರ ದೇಹಭಾಗಗಳನ್ನು ಸೃಷ್ಟಿಸಿರುವುದು ನಮ್ಮ ಹೆಮ್ಮೆಯ DRDO.

ಇಂತಹದೊಂದು ದಾಳಿ ನಡೆಸಬಹುದು ಎನ್ನುವ ಸಾಧ್ಯತೆಯ ವರದಿ ಕೊಡುವುದೇ ಈ ವಿಮಾನ. ಪೈಲಟ್‌ಗಳ ಹೊರತಾಗಿ ಈ ವಿಮಾನದಲ್ಲಿ 6–8ರಷ್ಟು ವಿವಿಧ ತಂತ್ರಜ್ಞಾನದ ತಂಡವೇ ಕಾರ್ಯನಿರತವಾಗಿರುತ್ತದೆ. ಒಬ್ಬೊಬ್ಬರೂ ಒಂದೊಂದು ವಿವಿಧ ಕೌಶಲ್ಯದ ಪರಿಣಿತರು.

ಇದರ ಮೊಟ್ಟಮೊದಲ ಕೆಲಸವೆಂದರೆ ಮುಖ್ಯ ಆಕ್ರಮಣದ ನಮ್ಮ ಹೀರೋ ಫೈಟರ್ ಪ್ಲೇನ್‌ಗಳು ಹೋಗುವ ಮಾರ್ಗದಲ್ಲಿ ಯಾರ್ಯಾರು ಹೊಂಚು ಹಾಕಿಕೊಂಡು ಕುಳಿತಿದ್ದಾರೆ ಎಂದು ಪತ್ತೆ ಹಚ್ಚುವುದು. ಯಾವ್ಯಾವ ರೇಡಿಯೋ ತರಂಗಾಂತರಗಳು ಇಲ್ಲಿ ಸಕ್ರಿಯವಾಗಿವೆ ಎಂಬುದನ್ನು ಕಂಡುಹಿಡಿಯುತ್ತದೆ.

ಇದರಲ್ಲಿ S, L, X, K, Ka, Ku ಬ್ಯಾಂಡುಗಳು ಅಂತೆಲ್ಲಾ ಇರುತ್ತವೆ. ಈ ತರಂಗಾಂತರಗಳಲ್ಲಿ ಕೆಲಸಮಾಡುವ ರಡಾರುಗಳು, ಗನ್ನುಗಳು, ಮಿಸೈಲುಗಳ ಸ್ಥಳಗಳನ್ನು ಪತ್ತೆಹಚ್ಚಿ ಸಂಪೂರ್ಣ ಅಂಕಿ ಅಂಶಗಳ ಪಟ್ಟಿಯನ್ನು ಸಿದ್ಧಪಡಿಸಲಾಗುತ್ತದೆ. ಇದನ್ನು Threat Library ಎನ್ನುತ್ತಾರೆ. ಈ ಮಾಹಿತಿಯನ್ನು ನಮ್ಮ ಫೈಟರ್ ಏರೋಪ್ಲೇನುಗಳ ವಿದ್ಯುನ್ಮಾನ ವ್ಯವಸ್ಥೆಯಲ್ಲಿ ಅಳವಡಿಸಲಾಗುತ್ತದೆ. ಈ ಶತ್ರುಗಳ ರಾಡಾರ್ ಅಥವಾ ಮಿಸೈಲುಗಳ ಕಾರ್ಯಪರಿಧಿ ಪ್ರವೇಶಿಸಿದ ಕೂಡಲೇ ಅವುಗಳನ್ನು

ಪುಟ 5 ಕ್ಕೆ ➢

➢ ಪುಟ 3 ರಿಂದ..... ನಭ ಸ್ಪರ್ಶಂ ದೀಪ್ತಂ...

ಆ ಸಮಯಕ್ಕೆ ಸ್ವಯಂಚಾಲಿತವಾಗಿ ನಿಷ್ಕ್ರಿಯಗೊಳಿಸುವುದು jammer ವ್ಯವಸ್ಥೆ!

ಆಕ್ರಮಣದ ದಿನ, ಸಮಯ ನಿರ್ಧಾರವಾದ ನಂತರ ಮೊಟ್ಟಮೊದಲು ಕಾರ್ಯಪ್ರವೃತ್ತರಾಗುವುದೇ ಈ ತಂಡ. ಧೀರ್ಘ ಸಮಯದವರೆಗೆ ಆಕಾಶದಲ್ಲಿರುವ ಕ್ಷಮತೆ ಹೊಂದಿರುವ ಈ ವಿಮಾನಕ್ಕೆ ಇಂಧನ ಕಡಿಮೆಯಾದರೆ IL 78 ಎನ್ನುವ ಆಕಾಶದ ಇಂಧನ ಟ್ಯಾಂಕರ್ ಈ ವಿಮಾನ ಇದ್ದಲ್ಲಿಗೇ ಬಂದು ನಡು ಆಗಸದಲ್ಲಿ ಇಂಧನ ತುಂಬಿಸಿ ಇನ್ನೂ ಹಲವಾರು ಗಂಟೆಗಳ ಕಾರ್ಯಕ್ಷಮತೆಯ ಅವಧಿಯನ್ನು ಹೆಚ್ಚಿಸಿಕೊಳ್ಳಲಾಗುತ್ತದೆ.

ಈ ಕಾರ್ಯಾಚರಣೆಯ ಗೌಪ್ಯತೆಯನ್ನು ಕಾಪಾಡಲು ಏರೋಪ್ಲೇನುಗಳನ್ನು ಒಂದೇ ಸಲ, ಒಂದೇ ನೆಲೆಯಿಂದ ಹಾರಿಸುವುದಿಲ್ಲ. ಆಕ್ರಮಣಕ್ಕೆ ಸಂಪೂರ್ಣ ಸಿದ್ಧಗೊಳಿಸಿದ ವಿಮಾನಗಳು ಒಂದೊಂದಾಗಿ, ಅನುಮಾನ ಬರದ ಹಾಗೆ ಆಕಾಶ ಸೇರಿಕೊಂಡು AEW&C ಏರೋಪ್ಲೇನಿನ ಸಂಪರ್ಕಕ್ಕೆ ಬಂದು ಅವರ, ನಿರ್ದೇಶನದ ಪ್ರಕಾರ ಮುಂದುವರೆಯುತ್ತವೆ. ಸುಮಾರು 40 ಫೈಟರ್‌ಪ್ಲೇನ್‌ಗಳ ನಿಯಂತ್ರಣವನ್ನು ಏಕಕಾಲಕ್ಕೆ ನಿಯಂತ್ರಿಸುವ ಕ್ಷಮತೆ ಇದೆ.

ಇತ್ತ ಫೈಟರ್ ವಿಮಾನಗಳು ಶತ್ರುಗಳ ರಾಡಾರಿಗೆ ಕಾಣಿಸದ ಹಾಗೆ ಮರದೆತ್ತರದಲ್ಲೇ ಹಾರುತ್ತಾ ಮೊದಲೇ ನಿರ್ಧರಿಸಿದ ಒಂದು ಸ್ಥಳಕ್ಕೆ ಮೂರು ಏರೋಪ್ಲೇನುಗಳ ಒಂದು ಸೆಕ್ಷನ್ ಬಂದು ಸೇರುತ್ತವೆ. ಹಾಗೇ ಒಟ್ಟು ನಾಲ್ಕು ಈ ತರಹದ ಸೆಕ್ಷನ್‌ಗಳು, ಒಟ್ಟು ಹನ್ನೆರಡು ಪ್ಲೇನ್‌ಗಳು ನಾಲ್ಕು ಸ್ಥಳಗಳಲ್ಲಿ ಸೇರಿರುವುದನ್ನು ಈ AEW&C ಪ್ಲೇನಿನ ಮುಖಾಂತರ ದೃಢೀಪಡಿಸಲಾಗುತ್ತದೆ.

ಈ ಪೂರ್ವ ನಿರ್ಧಾರಿತ ಪಾಯಿಂಟುಗಳನ್ನು Initial Point (IP) ಎನ್ನುತ್ತಾರೆ. ಎಲ್ಲಾ 12 ಏರೋಪ್ಲೇನುಗಳನ್ನು ಸೇರಿಸುವ ಪಾಯಿಂಟಿಗೆ Master Initial Point (MIP) ಎನ್ನುತಾರೆ. ಇದು ನಮ್ಮ ಹೀರೋಗಳ ಮೇಕಪ್ ಹಂತ.. ಇನ್ನು ಮುಂದೆ ಇದೆ, ಲೈಟ್ಸ್, ಕ್ಯಾಮೆರಾ, ಆ್ಯಕ್ಷನ್...

ಅಂತಿಮ ಆಕ್ರಮಣಕ್ಕೆ ಮುನ್ನ ಇನ್ನೊಮ್ಮೆ ಎಲ್ಲಾ ವಿಮಾನಗಳು ತಮ್ಮ ತಮ್ಮ ಇಂಧನ ಸಾಕಷ್ಟು ಇದೆಯೇ ಎಂದು ಪರಿಶೀಲಿಸಿಕೊಳ್ಳುತ್ತಾರೆ. ಹಾಗೇನಾದರೂ ಇಂಧನದ ಅವಶ್ಯಕತೆ ಇದ್ದರೆ ಗಡಿಭಾಗದ ಆಕಾಶದಲ್ಲಿ IL 78 ಎನ್ನುವ ಬೃಹದಾಕಾರದ ಟ್ಯಾಂಕರ್ ವಿಮಾನ ಆ ಫೈಟರ್ ವಿಮಾನಗಳಿಗೆ ಇಂಧನವನ್ನು ಪೂರೈಸುತ್ತದೆ.

ಇನ್ನು ಶತ್ರುಗಳ ರಾಡಾರಿನ ಚಕ್ರವ್ಯೂಹವನ್ನು ಭೇದಿಸುವ ಸಮಯ. ಇದಕ್ಕೆ ಎರಡು ಉಪಾಯಗಳಿವೆ. ಒಂದು ಮರದೆತ್ತರದಲ್ಲೇ ವಿಮಾನಗಳನ್ನು ಹಾರಿಸುವುದು. ಆದರೆ ಕಗ್ಗತ್ತಲಿನ ಸಮಯ, ಈಗ ಎಲ್ಲೆಡೆ ಮೊಬೈಲ್ ಟವರುಗಳ ಹಾವಳಿ, ಅಪಾಯವಲ್ಲವೇ? ಅದಕ್ಕೆಂದೇ ಈ ಪೈಲಟ್‌ಗಳು night vision goggles ಧರಿಸಿರುತ್ತಾರೆ, ಅಮಾವಾಸ್ಯೆಯ ಕತ್ತಲಲ್ಲೂ ಬೆಳದಿಂಗಳ ಬಾಲೆ ಕಾಣುತ್ತಾಳೆ!

ಅದೇ ಸಮಯದಲ್ಲಿ AEW&C ಏರೋಪ್ಲೇನಿನಲ್ಲಿರುವ ತಾಂತ್ರಿಕ ತಂಡ ಶತ್ರುಗಳ ರಾಡಾರುಗಳನ್ನು ನಿಷ್ಕ್ರಿಯಗೊಳಿಸುವ ಕೆಲಸಮಾಡುತ್ತದೆ. ಕೆಲಕಾಲದವರೆಗೆ ರಾಡಾರಿನ ಪರದೆಯ ಮುಂದೆ ಕುಳಿತಿದ್ದವರಿಗೆ ಕಣ್ಣು ಕುಕ್ಕುವಂತಹ ಬೆಳಕು, ಏನಾಯಿತು ಏನಾಯಿತು ಎಂದು ತಡಕಾಡುವಷ್ಟರಲ್ಲಿ ನಮ್ಮ ಫೈಟರ್ ವಿಮಾನಗಳು ಗಡಿಂಯೊಳಗೆ ನುಗ್ಗಿ ಬಿಟ್ಟಿರುತ್ತವೆ. ಇನ್ನು ಮುಂದೆ ಆಗುವ ಕೆಲಸಗಳೆಲ್ಲಾ ಚಕಚಕನೆ ಆಗಬೇಕು. ಇನ್ನೇನು ಉಗ್ರರ ಶಿಬಿರಗಳು ಇನ್ನೊಂದು ಕಿಮೀ ದೂರವಿರುವಾಗ ಈ ಹನ್ನೆರಡು ವಿಮಾನಗಳು ಮೂರು ಮೂರರ ಗುಂಪಿನಲ್ಲಿ ನಾಲ್ಕು ಪೂರ್ವನಿರ್ಧಾರಿತ ಸ್ಥಳದ ದಿಕ್ಕಿನಲ್ಲಿ ದೌಢಾಯಿಸುತ್ತಾ ಮೇಲಕ್ಕೇರತೊಡಗುತ್ತವೆ. ಈಗ ಅವರು ಹೊಡೆದುರುಳಿಸಬೇಕಾದ ಗುರುತಿನ ಜಾಗ ಸ್ಪಷ್ಟವಾಗಿ ಕಾಣುತ್ತದೆ. ಪ್ರತಿಯೊಬ್ಬ ಪೈಲೆಟ್‌ಗೂ ತಾನು ಬಾಂಬು ಹಾಕಿ ಹೊಡೆದುರುಳಿಸುವ ಜಾಗದ, ಅದರ ಸುತ್ತಮುತ್ತಲಿನ ಪರಿಸರದ ಪರಿಚಯವಿರುತ್ತದೆ. ಹಾಗಾಗಿ ಪೈಲಟ್‌ಗಳು ಏಕಲವ್ಯನಂತೆ ತಮ್ಮ ಎಲ್ಲಾ ಗಮನವನ್ನು ಅಲ್ಲಿಗೇ ಕೇಂದ್ರೀಕರಿಸುತ್ತಾರೆ. ಆ ಟಾರ್ಗೆಟ್ ಕಂಡ ಕೂಡಲೇ ಲೇಸರ್ ಕಿರಣಗಳ ಸಹಾಯದಿಂದ ಆ ಸ್ಥಳವನ್ನು ಲಾಕ್ ಮಾಡಲಾಗುತ್ತದೆ. ಇನ್ನು 250 ಕೆಜಿ ಭಾರದ ಬಾಂಬ್ ಆ ಲೇಸರ್ ಕಿರಣಗಳನ್ನು ಅನುಸರಿಸಿ ನಿರ್ದಿಷ್ಟವಾದ ಸ್ಥಳದಲ್ಲಿ ಸ್ಫೋಟಗೊಳ್ಳುತ್ತದೆ.



ಅದೇ ಸಮಯದಲ್ಲಿ Battle Damage Assessment (BDA) ನ ವೀಡಿಯೋ ರೆಕಾರ್ಡಿಂಗ್ ಸಹಾ ನಡೆಯುತ್ತದೆ. ಬಾಲಾಕೋಟಿನ ಆಕ್ರಮಣದ ಬಿಡಿಎ ಎಷ್ಟು ಗೊತ್ತೇ–100%! ತಮ್ಮ ತಮ್ಮ ಕಾರ್ಯಾಚರಣೆ ಸಂಪನ್ನಗೊಳಿಸಿದ ಈ ವಿಮಾನಗಳು ಪುನಃ ಒಂದೊಂದಾಗಿ ಸಮೂಹದ ತಮ್ಮ ಸ್ಥಾನಕ್ಕೆ ಬಂದು ಸೇರಿಕೊಳ್ಳುತ್ತವೆ. ಇಷ್ಟೊತ್ತಿಗಾಗಲೇ ಶತ್ರುಗಳ ವಿಮಾನಗಳು, ಮಿಸ್ಸೈಲ್‌ಗಳು, ಗನ್ನುಗಳು ಚೌಕನ್ನರಾಗುವ ಸಾಧ್ಯತೆ ಇರುವುದರಿಂದ ಆದಷ್ಟೂ ಬೇಗ ಸುರಕ್ಷಿತವಾಗಿ ನಮ್ಮ ಗಡಿಯೊಳಗೆ ಪ್ರವೇಶಿಸುವುದೇ ಮುಖ್ಯಗುರಿ. ಗಡಿಯಲ್ಲೇ ಕಾತರದಿಂದ ಇವರಿಗಾಗಿ ಕಾಯುತ್ತಿರುತ್ತವೆ ಸುಖೋಯ್–30 ಫೈಟರ್ ವಿಮಾನಗಳು. ಶತ್ರುಗಳ ವಿಮಾನಗಳು ಏನಾದರೂ ಹಿಂಬಾಲಿಸುತ್ತಾ ಬಂದಿದ್ದರೆ ಅವುಗಳನ್ನು ವಿಚಾರಿಸಿಕೊಳ್ಳುವುದು ಈ ಸುಖೋಯ್–30 ವಿಮಾನಗಳ ಜವಾಬ್ದಾರಿ. ಇದಕ್ಕೆ ಪೂರಕವಾಗಿ ನಮ್ಮ Surface to Air Missile (SAM) ತಯಾರಾಗಿರುತ್ತದೆ. ಇಂಧನದ ಅವಶ್ಯಕತೆ ಇರುವ ವಿಮಾನಗಳಿಗೆ ಮತ್ತೊಮ್ಮೆ Mid Air Refuelling ಮಾಡಲಾಗುತ್ತದೆ.

ಇಷ್ಟೆಲ್ಲಾ ಕಾರ್ಯಾಚರಣೆ 45 ನಿಮಿಷಗಳಲ್ಲಿ ಮುಗಿಯುತ್ತದೆ. ಆದರೆ ಅದರ ಹಿಂದಿರುವ ತರಬೇತಿ, ದೈಹಿಕ ಮತ್ತು ಮಾನಸಿಕವಾದ ತಯಾರಿ ನಿರಂತರ. ವಾಯುಸೇನೆಯ ಮಂತ್ರವೇನೆಂದರೆ 'ತರಬೇತಿ ಸಮಯದಲ್ಲಿ ಎಷ್ಟು ಹೆಚ್ಚು ಬೆವರು ಸುರಿಸುತ್ತೀರೋ ಯುದ್ಧದಲ್ಲಿ ಅಷ್ಟು ಕಡಿಮೆ ರಕ್ತಪಾತವಾಗುತ್ತದೆ'.

ಆಗಲೇ ಆಕಾಶದಲ್ಲಿ ವಿಜೃಂಭಣೆಯಿಂದ ವಿಜಯೋತ್ಸವದಿಂದ ಮೆರೆಯಲು ಸಾಧ್ಯ.

**Touch the Sky with Glory "ನಭ ಸ್ಪರ್ಶಂ ದೀಪ್ತಂ"**

**ಕೃಪೆ– ಹೊಸದಿಗಂತ**

**–ವಿಂಗ್ ಕಮಾಂಡರ್ ಸುದರ್ಶನ**

# ಭಾರತದ ಇಂದಿನ ಪರಿಸ್ಥಿತಿಯಲ್ಲಿ ಸಂಘಟಿತ ಶಕ್ತಿಯ ಅಗತ್ಯ

■ ಡಾ॥ ಟಿ.ಎನ್ ಲೋಕೇಶ್
ಪ್ರಾಧ್ಯಾಪಕರು & ಚಿಂತಕರು

ಭಾರತ 'ದೇವಭೂಮಿ', 'ಯೋಗಭೂಮಿ'. ತನ್ನ ಮಣ್ಣಿನ ಕಣ ಕಣದಲ್ಲೂ ದೈವತ್ವ ಸಂಲಗ್ನತೆಯು ಉಸಿರಿನ 'ಕರ್ಮಭೂಮಿ'. ಜಗತ್ತಿನ ಸರ್ವಧರ್ಮಗಳನ್ನು ತನ್ನೊಡಲಿನಲ್ಲಿ ಪೋಷಿಸಿ, ಆರಾಧಿಸಿದ 'ಮಾತೃಸ್ವರೂಪಿಯ 'ಧರ್ಮಭೂಮಿ'. ಇಂತಹ ಪುಣ್ಯ ಭೂಮಿಯ ವಾರಸುದಾರರಾದ ಹಿಂದೂಗಳ ನರನಾಡಿಗಳ ನೆತ್ತರಿನಲ್ಲಿ ಧೀರೋದತ್ತ ರಾಷ್ಟ್ರಭಕ್ತಿ, ಅಚಲ ರಾಷ್ಟ್ರಪ್ರೇಮದ ಗುಣವಿಶೇಷಣ ಬೆಸೆದು ಹೋಗಿದೆ. ಆದಕಾರಣ ಸಾವಿರಾರು ವರ್ಷಗಳಿಂದಲೂ ನಿರಂತರ ಪರಕೀಯರ ಆಕ್ರಮಣದ ನಡುವೆಯು ನಮ್ಮ 'ಮಾತೃಭೂಮಿ' ತನ್ನ ಮೂಲತನದ ಪಾವಿತ್ರ್ಯತೆಯ ಸತ್ವವನ್ನು ಕಳೆದುಕೊಂಡಿಲ್ಲ.

ಭಾರತವೆಂದರೆ 'ಸದೃಢ ಸಹಿಷ್ಣುತೆ', 'ಲೋಕಹಿತ', 'ಸಮನ್ವಯ', 'ಸಹಬಾಳ್ವೆ', 'ಆತ್ಮೀಯತೆ', 'ನಿಸ್ವಾರ್ಥ', 'ಸಮಷ್ಠಿ', 'ಸಾಮರಸ್ಯ' ಹಾಗೂ 'ಸಮಗ್ರ ಜೀವನ ದರ್ಶನ' ಸಾಧಿಸಿ, ಜಗತ್ತಿಗೆ ಬೆಳಕು ತೋರಿದ ಏಕಮೇವಾ ಜಗದ್ಗುರು ರಾಷ್ಟ್ರವೆಂದರೆ ಅತಿಶಯೋಕ್ತಿಯಲ್ಲ.

ಭಾರತ ಪರಕೀಯ ದಾಸ್ಯ ಸಂಕೋಲೆಯಿಂದ ಬಿಡುಗಡೆ ಹೊಂದಿ ರಾಜಕೀಯ ಸ್ವಾತಂತ್ರ್ಯ ಗಳಿಸಿದ ನಂತರ ಸತತ ಐದು ದಶಕಗಳಿಗೂ ಅಧಿಕವಾಗಿ ಕೇಂದ್ರದಲ್ಲಿ ಅಧಿಕಾರದ ಗದ್ದುಗೆ ಹಿಡಿದ ಕಾಂಗ್ರೆಸ್ ಭಾರತವನ್ನು ದುಸ್ತರ, ನಿಸ್ತೇಜಗೊಳಿಸಿದ್ದು ಈಗ ಬೆತ್ತಲೆ ಸತ್ಯ. ಅಂದಿನ ಪ್ರಧಾನಿ ನೆಹರೂರವರು ಭಾರತೀಯರಿಗೆ ಎಸಗಿದ ವಿಶ್ವಾಸದ್ರೋಹ ಇಂದಿಗೂ ಬೆಂಬಿಡದ ಭೂತದಂತೆ ರಾಷ್ಟ್ರವನ್ನು ತಲ್ಲಣಗೊಳಿಸುತ್ತಿರುವುದು ಸಹ ಅಷ್ಟೆ ಸತ್ಯವಾಗಿದೆ. ಪಾಕ್ ಆಕ್ರಮಿತ ಕಾಶ್ಮೀರದ ಬಗ್ಗೆ ಎಳ್ಳಷ್ಟು ಚಿಂತಿಸದೆ, 370 ನೇ ವಿಧಿಯನ್ನು ಸರ್ದಾರ್‌ವಲ್ಲಭಬಾಯಿ ಪಟೇಲ್‌ರ ವಿರೋಧದ ನಡುವೆಯೂ ಕಾಶ್ಮೀರದಲ್ಲಿ ಅನುಷ್ಠಾನಕ್ಕೆ ತಂದದ್ದು ಹಾಗೂ ಅಮೇರಿಕಾದ ಮನವಿ ತಿರಸ್ಕರಿಸಿ ವಿಶ್ವಸಂಸ್ಥೆಯ ರಕ್ಷಣಾ ಕೌನ್ಸಿಲ್‌ನ ಅಜೀವ ಸದಸ್ಯತ್ವವನ್ನು ನಿರಾಕರಿಸಿ, ಚೀನಾಗೆ ಬಿಟ್ಟುಕೊಟ್ಟಿದ್ದು ನೆಹರೂರವರ ಮೂರ್ಖತನದ ಪರಮಾವಧಿಯಲ್ಲದೇ ಮತ್ತೇನು?

ಪ್ರಸಕ್ತ ಭಾರತೀಯ ಸಮಾಜ ಭ್ರಷ್ಟಾಚಾರ, ಸ್ವಜನಪಕ್ಷಪಾತ, ಸ್ವಾರ್ಥಪರ ರಾಜಕೀಯ, ಕುಟುಂಬ ರಾಜಕೀಯ, ಮಹಿಳಾ ಅಸುರಕ್ಷತೆ, ಪ್ರಾಂತೀಯತೆ, ಮತಾಂಧತೆ, ಅಂಧ ಭಾಷಾಭಿಮಾನ, ಹಿಂಸೆ, ಕ್ರೌರ್ಯ, ಅತ್ಯಾಚಾರ, ರಾಷ್ಟ್ರವಿರೋಧಿ ಚಟುವಟಿಕೆಗಳು, ನಕ್ಸಲಿಸಂ ಹಾಗೂ ಭಯೋತ್ಪಾದನೆಯಂತಹ ರಕ್ಕಸ ಪಾಶವಿ ಕೃತ್ಯಗಳಿಗೆ ಸಿಲುಕಿ–ನಲುಗಿ ತತ್ತರಿಸಿಹೋಗಿದೆ.

14ನೇ ಫೆಬ್ರವರಿ 2019ರಂದು ಕಾಶ್ಮೀರದ ಪುಲ್ವಾಮದಲ್ಲಿ ಸಿ.ಆರ್.ಪಿ.ಎಫ್‌ನ ಯೋಧರ ಮೇಲೆ ಪಾಕಿಸ್ತಾನದ ಜೈಶ್–ಇ–ಮೊಹಮ್ಮದ್ ಉಗ್ರ ಸಂಘಟನೆ ಆತ್ಮಾಹತ್ಯಾ ದಾಳಿಯ ವಿಧ್ವಂಸಕ ಪೈಶಾಚಿಕ ಕೃತ್ಯಕ್ಕೆ 40 ಮಂದಿ ಭಾರತೀಯ ಯೋಧರು ಹುತಾತ್ಮರಾದರು. ಉಗ್ರರ ಈ ದಾಳಿ ಭಾರತದ ಸಂಘಟಿತ ಶಕ್ತಿಯನ್ನೇ ತತ್ತರಗೊಳ್ಳುವಂತೆ ಮಾಡಿತ್ತು. ಪಾಕಿಸ್ತಾನಿ ಉಗ್ರರ ಈ ಕೃತ್ಯವನ್ನು ಜಗತ್ತಿನ ಎಲ್ಲಾ ರಾಷ್ಟ್ರಗಳ ಮುಖಂಡರು ಖಂಡಿಸಿದ್ದರು. ಇದರ ಬೆನ್ನಲ್ಲೆ ಪ್ರತಿಕಾರವಾಗಿ ಭಾರತೀಯ ವಾಯುಸೇನೆ ಪಾಕ್ ಆಕ್ರಮಿತ ಕಾಶ್ಮೀರದ ಬಾಲಕೋಟ್‌ನ ಉಗ್ರರ ಅಡಗುತಾಣದ ಮೇಲೆ ಸರ್ಜಿಕಲ್ ಏರ್‌ಸ್ಟ್ರೈಕ್ ನಡೆಸಿ 300 ಕ್ಕೂ ಅಧಿಕ ಉಗ್ರರನ್ನು ಹತ್ಯೆಮಾಡಿತ್ತು. ಇದರಿಂದ ಭಾರತ ಭಯೋತ್ಪಾದನೆಯ ವಿರುದ್ಧ ಸಮರ ಸಾರಿ ಜಗತ್ತಿಗೆ ಸ್ಪಷ್ಟ ಸಂದೇಶ ರವಾನಿಸಿತ್ತು.

ಬಾಲಕೋಟ್‌ನ ಮೇಲಾದ ಆಕ್ರಮಣದ ಪ್ರತಿಕಾರ ತೀರಿಸಿಕೊಳ್ಳಲು ಪಾಕ್‌ನ ಎಫ್ 16 ಯುದ್ಧವಿಮಾನ ಭಾರತದ ಗಡಿ ದಾಟಿ ಒಳನುಸುಳಿದ್ದನ್ನು ಕಂಡ ಭಾರತೀಯ ವಾಯುಸೇನೆಯ ಮಿಗ್–21ನ ವಿಂಗ್ ಕಮಾಂಡರ್ ಅಭಿನಂದನ್ ಅದನ್ನು ಹೊಡೆದುರುಳಿಸಿದ ಸಾಹಸದ ಯಶೋಗಾಥೆಗೆ ಜಗತ್ತೆ ಬೆರಗಾಗಿ ಹೋಗಿದೆ. ತದನಂತರ ಅಭಿನಂದನ್‌ರವರನ್ನು ಯುದ್ಧ ಖೈದಿಯಾಗಿ ಇಟ್ಟುಕೊಂಡ ಪಾಕಿಸ್ತಾನದ ಮೇಲೆ ರಾಜತಾಂತ್ರಿಕ ಒತ್ತಡ ಹೇರಿ ಕೇವಲ ಎರಡು ದಿನಕ್ಕೆ ಅಭಿನಂದನ್‌ರವರನ್ನು ತಾಯ್ನಾಡಿಗೆ ತಂದ ಶ್ರೇಯಸ್ಸು ಭಾರತದ ಹೆಮ್ಮೆಯ ಪ್ರಧಾನಮಂತ್ರಿ ನರೇಂದ್ರ ಮೋದಿಯವರಿಗೆ ಸಲ್ಲುತ್ತದೆ. "ಉದ್ದೇಶಗಳು ಸರಿಯಿದ್ದರೆ ಇತಿಹಾಸ ಮರುಕಳಿಸುತ್ತದೆ" ಎಂಬುದಕ್ಕೆ ಇದೇ ಜೀವಂತ ನಿದರ್ಶನ. ಇದು ಸದ್ಯ ಅಂತರಾಷ್ಟ್ರೀಯ ಮಟ್ಟದಲ್ಲಿ ಭಾರತಕ್ಕಿರುವ ಬೆಲೆ ಹಾಗೂ ಮೋದಿಗೆ ಸಿಕ್ಕ ಬಹುದೊಡ್ಡ ರಾಜತಾಂತ್ರಿಕ ಗೆಲುವು ಎಂದು ಬಣ್ಣಿಸಲಾಗುತ್ತಿದೆ.

ಮೇಜರ್ ಧನಸಿಂಗ್‌ಥಾಪಾ, ಸುಬೇದಾರ್ ಜೋಗಿಂದರ್ ಸಿಂಗ್, ಸಿದ್ಧಾರ್ಥ ವಶಿಷ್ಠ, ಕೆ. ನಚಿಕೇತರಂತಹ ಲಕ್ಷಾಂತರ ಭಾರತಮಾತೆಯ ಹೆಮ್ಮೆಯ ಯೋಧರನ್ನು ಇತಿಹಾಸ ಎಂದಿಗೂ ಮರೆಯಲು ಸಾಧ್ಯವಿಲ್ಲ. ದೇಶದ ಘನತೆ, ಗೌರವ, ಆಸ್ಮಿತೆಯ ಅನ್ವರ್ಥವೇ ಭಾರತೀಯ ಸೇನೆ ಎಂಬುದು ಅನೇಕ ಸಾರಿ ಸಾಬೀತಾಗಿದೆ.

ಪ್ರಸ್ತುತ 2019ರ ಲೋಕಸಭೆ ಚುನಾವಣೆಗೆ ಕ್ಷಣಗಣನೆ

ಪುಟ 10 ಕ್ಕೆ ➢

# ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಪಾತ್ರ

ಶ್ರೀಮತಿ ಸುನಿತಾ ಗಂಗಾಧರ್
ಬೆಂಗಳೂರು

ಪ್ರಪಂಚದ ಅತೀ ದೊಡ್ಡ ಸಫಲ ಜನತಂತ್ರ ಸಂವಿಧಾನವೆಂಬ ಅಭಿಧಾನ ಹೊಂದಿದ ರಾಷ್ಟ್ರ ಭಾರತ. ಪ್ರಜಾಪ್ರಭುತ್ವ ವ್ಯವಸ್ಥೆಯ ಮೂಲ ಆತ್ಮವೇ ಪ್ರಜೆಗಳು. ಅವರ ಅಭಿಪ್ರಾಯ ಬಲದಿಂದ ರೂಪುಗೊಂಡ ಪಕ್ಷಗಳೇ ದೇಶದ ಭವಿಷ್ಯ ರೂಪಿಸುವುದು. ಬಲಿಷ್ಠ ರಾಷ್ಟ್ರಗಳ ಪಟ್ಟಿಯಲ್ಲಿ ಸ್ಥಾನಗಳಿಸಿಕೊಳ್ಳುವತ್ತ ದಿಟ್ಟ ಹೆಜ್ಜೆಯಿಟ್ಟು ಸಾಗುತ್ತಿರುವ ಭಾರತ ಇಂದು ಮತ್ತೊಂದು ಲೋಕಸಭಾ ಚುನಾವಣೆ ಹೊಸ್ತಿಲಿನಲ್ಲಿದೆ. ಹಲವು ರಾಷ್ಟ್ರಗಳ ಪ್ರಜ್ಞಾವಂತ ಭಾರತೀಯ ಮತದಾರರ ನಡೆಯನ್ನು ಕಾತುರದಿಂದ ನಮ್ಮಷ್ಟೇ ಕುತೂಹಲದಿಂದ ಕಾಯುತ್ತಿರುವ ಕಾರಣ ಹಿಂದಿನ ಚುನಾವಣೆಯಲ್ಲಿ ಮತದಾರ ತನ್ನ ಕೈ ಬೆರಳ ತುದಿಯಿಂದ ಇತಿಹಾಸ ಬದಲಿಸಿ ಪ್ರಜೆಗಳೇ ಪ್ರಭುಗಳು ಅನ್ನೋದನ್ನ ಸಾಬೀತು ಪಡಿಸಿದ್ದೆ ಸಾಕ್ಷಿ.

ದೇಶದ ಹಿತದೃಷ್ಟಿಯಿಂದ ಚುನಾವಣಾ ಆಯೋಗವು ಕೂಡ ಹಲವು ವಿನೂತನ ಕಾರ್ಯಗಳನ್ನು ಯೋಜಿಸಿಕೊಂಡು ಮತದಾರರನ್ನು ಮತಗಟ್ಟೆಗೆ ಸೆಳೆಯಲು ಪ್ರಯತ್ನಿಸುತ್ತಿದೆ. ಮುಖ್ಯ ಚುನಾವಣಾಧಿಕಾರಿ ಯಾಗಿದ್ದ ಟಿ.ಎನ್. ಶೇಷನ್‌ರವರು ಮಾಡಿ ಹೋದ ಬದಲಾವಣೆಯು ಇಂದಿಗೂ ಕೂಡ ಜನಹಿತಕ್ಕಾಗಿ ರೂಪಿಸಿದ್ದು ನೆನೆಯಲೇಬೇಕಿದೆ. ಮತದಾನ ನಮ್ಮ ಪ್ರಥಮ ಕರ್ತವ್ಯವಾಗಿದ್ದು ಬದ್ಧತೆಯಿಂದ ಆ ಕಾರ್ಯದಲ್ಲಿ ಭಾಗಿಯಾಗೋದು ನಮ್ಮ ಪ್ರಥಮ ಆದ್ಯತೆಯಾಗಬೇಕು. ಗ್ರಾಮೀಣ ಪ್ರದೇಶಕ್ಕೆ ಹೋಲಿಸಿದರೆ ಸುಶಿಕ್ಷಿತರೇ ಅಧಿಕವಾಗಿರುವ ನಗರವಾಸಿಗಳು ಮತದಾನದ ದಿನ ಉದಾಸೀನತೆಯಿಂದಲೋ, ತಾತ್ಸಾರದಿಂದಲೋ ಆ ದಿನವನ್ನು ರಜೆಯನ್ನಾಗಿ ಕಳೆದು ಬಿಡುವುದು ಆಗಿದೆ. ಅಂಕಿ ಅಂಶಗಳ ಪ್ರಕಾರ ಕೇವಲ ಬೆಂಗಳೂರಿನಲ್ಲಿ 52.4 ರಷ್ಟು ಮಾತ್ರ 2013ರಲ್ಲಿ ದಾಖಲಾದ ಮತದಾನ ಪ್ರಮಾಣ. ಆಮೇಲೆ ಇದೆ ಜನ ಭವಿಷ್ಯದಲ್ಲಿನ ರಾಷ್ಟ್ರದ ಪರಿಸ್ಥಿತಿ ದೂಷಿಸುತ್ತಾ ಕೂಡುವುದು ಎಷ್ಟು ಸರಿ. ಎಲ್ಲಕ್ಕಿಂತ ಮೊದಲು ಮತದಾರ ತನಗೆ ಸಂವಿಧಾನ ಬದ್ಧವಾಗಿ ಪ್ರಾಪ್ತವಾದ ಈ ಶಕ್ತಿಯನ್ನು ಸರಿಯಾಗಿ ಅರಿತುಕೊಳ್ಳಬೇಕಿದೆ. ಕೇವಲ ನಿರ್ಲಕ್ಷ್ಯವೇ ಎಲ್ಲದಕ್ಕೂ ಮದ್ದಲ್ಲಾ. ರಾಜಕೀಯದ ದೊಡ್ಡ ದುರಂತವೆಂದರೆ ಸರ್ಕಾರಿ ಸೇವೆಯಲ್ಲಿರುವಂತೆ ಇದರಲ್ಲಿ ವಯಸ್ಸಿನ, ವಿದ್ಯಾರ್ಹತೆಯ ಮಾನದಂಡಗಳೇ ಇಲ್ಲಾ. ಅರ್ಹತೆ ಇಲ್ಲದವರು ಅಂದರೆ ಕಳಂಕಿತರು, ಭ್ರಷ್ಟರು, ಅಪರಾಧಿ ಹಿನ್ನೆಲೆ ಹೊಂದಿರುವವರು, ಬೇಜವಾಬ್ದಾರಿ, ರಾಷ್ಟ್ರವಿರೋಧಿ ಹೇಳಿಕೆ ಕೊಡುವಂತಹವರು ವ್ಯರ್ಥ, ಕುಟುಂಬಗಳಿಗೆ ಸೀಮಿತಗೊಳ್ಳುತ್ತಿರುವ ರಾಜಶಾಹಿ ನಡಾವಳಿಗಳು ಜನಾದೇಶವನ್ನೇ ತಿರುಚಿ ತಮ್ಮ ರಾಜಕೀಯ ದಾಳ ಉರುಳಿಸುತ್ತಿರುವುದು ಪ್ರಜೆಗಳು ಮತದಾನದಿಂದ ಮುಖ ತಿರುಗಿಸುವುದಕ್ಕೆ ಕಾರಣವಾಗಿರಬಹುದು.

ಆದರೆ ಇಲ್ಲಿ ದೇಶದ ಅಭಿವೃದ್ಧಿಯ ಪ್ರಶ್ನೆಯಾಗಿರುವುದರಿಂದ ನಾವು ಆಶಾವಾದಿತನ ತೊರೆಯದೆ ಪರಿಸ್ಥಿತಿಯ ಸೂಕ್ತ ಅವಲೋಕನ ಮಾಡಿ ಇರುವ ಸಮಸ್ಯೆಗಳೇನು? ಅದಕ್ಕೆ ಸೂಕ್ತವಾಗಿ ಸ್ಪಂದಿಸುತ್ತಿರುವವರಾರು? ವಿರೋಧ ಪಕ್ಷ, ಆಡಳಿತ ಪಕ್ಷಗಳ ಕಾರ್ಯ ವೈಖರಿ ಹೇಗಿದೆ? ಅವರುಗಳು ಹಾಕಿಕೊಂಡ ಪ್ರನಾಳಿಕೆಯಲ್ಲಿನ ಘೋಷಣೆಗಳು ಕಾರ್ಯರೂಪಕ್ಕೆ ಬಂದವುಗಳೆಷ್ಟು? ಸಫಲತೆಗಳೇನು? ಜನರಿಗೆ ಕೇವಲ ಕ್ಷಣಿಕ ಆಮಿಷಗಳ ಕಣ್ಣಿಗೆ ಕಾಣುವ ಕೆಲವನ್ನಷ್ಟೆ ಅನುಷ್ಠಾನಕ್ಕೆ ತಂದಿರುವರೋ ಅಥವಾ ಗಡಿ ಅಂತರಾಷ್ಟ್ರೀಯ ಮಟ್ಟದಲ್ಲಿ ದೇಶಕ್ಕೆ ಅನುಕೂಲವಾಗೋ ಸುದೀರ್ಘ ಯೋಜನೆಯನ್ನು ಹಾಕಿಕೊಂಡಿದೆಯೋ ಎಲ್ಲ ವಿಷಯಗಳತ್ತ ಸೂಕ್ಷ್ಮವಾಗಿ ಮತದಾರ ಅವಲೋಕಿಸಲೇಬೇಕಿದೆ.

ಮತದಾರರ ಹತ್ತಿರ ಅಭ್ಯರ್ಥಿ ಪಕ್ಷದವರನ್ನು ಪ್ರಶ್ನಿಸಿ ಅವರ ಯೋಜನೆ, ನಮ್ಮ ಸಮಸ್ಯೆ ಕೇಳಿ ಸ್ಪಷ್ಟತೆ ಇರುವ ದೇಶದ ಅಭಿವೃದ್ಧಿಗೆ ಸ್ಪಂದಿಸೋ ಮನಸ್ಥಿತಿ ಇರುವ ಪಕ್ಷ ಜನ–ಮನ ಗೆಲ್ಲಬಹುದು. ಕೇವಲ ವೋಟಿಗಾಗಿ 5 ವರುಷಕ್ಕೊಮ್ಮೆ ಬರುವ ವ್ಯಕ್ತಿಗಳಿಗೆ ಕ್ಷಣಿಕ ಆಮಿಷದ ಮೂಲಕ ಅಮಾಯಕರನ್ನಷ್ಟೆ ಮೋಸಗೊಳಿಸಬಹುದೇ ಹೊರತು ಪ್ರಜ್ಞಾವಂತರನ್ನಲ್ಲ. ಅಂತಹವರಿಗೆ ಚುನಾವಣೆಯಲ್ಲಿ ಸರಿಯಾಗಿ ಉತ್ತರವನ್ನು ಜನರು ಮತದಾನದ ಮೂಲಕ ನೀಡುವರು. ಮತದ 'ದಾನ' ಅಪಾತ್ರರಿಗೆ ಲಭ್ಯವಾಗುವ ಇನ್ನೊಂದು ಸುಲಭದಾರಿ 'ನೋಟಾ'. ಸರಿಯಾಗಿರುವ ಭ್ರಷ್ಟರಹಿತ ಪ್ರತಿನಿಧಿ ಅಥವಾ ಪಕ್ಷವನ್ನು ಆರಿಸೋ ಗುರುತರ ಜವಾಬ್ದಾರಿ ಮತದಾರರ ಮೇಲಿದೆ.

ಸರ್ಕಾರಿ ಬೊಕ್ಕಸ ಖಾಲಿ ಮಾಡಿ ಆಮಿಷ ಭಾಗ್ಯಗಳನ್ನು ಮಾಡಿ ಭವಿಷ್ಯದ ಚಿಂತನೆಯನ್ನೇ ಮಾಡದ, ದೇಶಕ್ಕಾಗಿ ಜೀವನ ಮುಡಿಪಿಟ್ಟಂತವರನ್ನು ಗಮನಿಸಿ ನಿರ್ಧರಿಸಬೇಕಿದೆ. ದೀರ್ಘಕಾಲೀನ ಅಭಿವೃದ್ಧಿಯ ಪ್ರಗತಿ ಆ ಹೊತ್ತಿಗೆ ಫಲ ಕೊಡದಿದ್ದರೂ ನಿಧಾನವಾಗಿ ದೇಶದ ಪ್ರಗತಿಗೆ ತನ್ನದೇ ಆದ ಶಾಶ್ವತ ಪರಿಹಾರ ನೀಡುವ ಯೋಜನೆಗಳನ್ನು ಜಾರಿಗೆ ತಂದವರನ್ನು ಅವಲೋಕಿಸಿ ಸೂಕ್ತ ನಿರ್ಧಾರ ಕೈಗೊಂಡು ದೇಶದ ಹಿತದೃಷ್ಟಿಯನ್ನು ಮಾತ್ರ ಗಮನಿಸಿ ಮತ ನೀಡಬೇಕಿದೆ. ಕೇವಲ ಜಾತಿ ಪ್ರೇಮ, ವ್ಯಕ್ತಿ ಪ್ರೇಮ, ಕುಟುಂಬ ಪ್ರೇಮ ಇವೆಲ್ಲಾ ದೇಶದ ಉನ್ನತಿಗೆ ಕಾರಣವಾಗೋ ಅಂಶಗಳಲ್ಲ.

ಪ್ರಪಂಚಕ್ಕೆ ವಿಶ್ವಗುರು ನಮ್ಮ ದೇಶವಾಗಬೇಕೆಂಬ ಭಾವನೆ ಇರುವ ಪ್ರತಿಯೊಬ್ಬ ಭಾರತೀಯ ತನ್ನ ತಿಳುವಳಿಕೆಯ ಶಕ್ತಿ ಬಳಸಿ, ಕರ್ತವ್ಯ ನಿಭಾಯಿಸಿದಲ್ಲಿ ಬರುವ ದಿನಗಳಲ್ಲಿ ಇನ್ನಷ್ಟು ಪ್ರಗತಿಪರ ಕಾರ್ಯ ಮಾಡುವುದಕ್ಕೆ ಸಜ್ಜಾದ ಪಕ್ಷವನ್ನೇ ಕೇಂದ್ರದಲ್ಲಿ ನೆಲೆನಿಲ್ಲಿಸಬೇಕಾಗಿದೆ. ಪರಿಸರದಲ್ಲಿ ಅಮಾಯಕರಿಗೆ, ಯುವಜನತೆಗೆ ಸೂಕ್ತ ಮಾರ್ಗದರ್ಶನ ನೀಡಿ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳು ಆಳುವವರು ಎಷ್ಟೇ ಬಲಿಷ್ಠರಾದರೂ ಮತದಾರರ ಇಚ್ಛೆಯಿಲ್ಲದೆ ಯಾರೂ ಅವರ ಸೇವಕರಾಗಲಾರರೆಂದು ಬಲವಾದ ಸಂದೇಶ ನೀಡಬೇಕಿದೆ. ಒಂದು ದಿನದ ಮತದಾನ ನಿಮ್ಮಿಚ್ಛೆಯ ನಿಶ್ಚಿಂತ ಭವಿಷ್ಯಕ್ಕೆ ನಾಂದಿಯಾಗುವುದರಿಂದ ಮರೆಯದೆ ಮತಚಲಾಯಿಸಿ, ಚಲಾಯಿಸದವರಿಗೆ ಅರಿವು ನೀಡಿ ಎಲ್ಲರೂ ಸೇರಿ ಸಶಕ್ತ ದೇಶ ಕಟ್ಟೋಣ ಬನ್ನಿ.

# ಮೌಲ್ಯಮಾಪನ, ಶಿಕ್ಷಕರೇ ಸ್ವಲ್ಪ ಗಮನಿಸಿ!

**ಶ್ರೀಮತಿ ರೇಣುಕಾ ಹಂಗನಹಳ್ಳಿ**
ಕನಕಪುರ



ಪ್ರತಿ ವರ್ಷದ ಪರೀಕ್ಷೆಗಳು ಸಮೀಪಿಸುತ್ತಿದ್ದಂತೆ, ಮಕ್ಕಳಿಗೂ, ಶಿಕ್ಷಕರಿಗೂ ಭಯ ಆತಂಕ. ವರ್ಷದ ಪರಿಶ್ರಮದ ಫಲದ ನಿರೀಕ್ಷೆಯ ಫಳಿಗೆ ವರ್ಷದ ಪರಿಶ್ರಮದ ಫಲದ ಆಸೆಯು ಅಡಕವಾಗಿರುವುದು 'ಮೌಲ್ಯಮಾಪನ' ಎಂಬ ಮಹತ್ವದ ಜವಾಬ್ದಾರಿಯುತವಾದ ಕರ್ತವ್ಯದಲ್ಲಿ ಎಂಬುದು ಎಲ್ಲರಿಗೂ ಸಾಮಾನ್ಯವಾಗಿ ತಿಳಿದಿರುವ ಸಂಗತಿ.

'ಮೌಲ್ಯಮಾಪನ' ಎಂಬ ಶಬ್ದವನ್ನು ಅರ್ಥೈಸುವುದಾದರೆ ಒಂದು ವಿಷಯದ, ಮಕ್ಕಳಲ್ಲಿ ಅಡಕವಾಗಿರುವ ಪ್ರತಿಭೆಯ ಅನಾವರಣ, ಆ ವಿಷಯದಲ್ಲಿ ಆ ಮಗು ಹೊಂದಿರುವ ಪ್ರೌಢಿಮೆಯನ್ನು ಒಂದು ಚೌಕಟ್ಟಿನಲ್ಲಿ ಅರ್ಥೈಸಿ, ಮಾಪನ ಮಾಡಿ ಮೌಲ್ಯಯುತವಾದ ಶ್ರೇಣಿ, ಅಂಕ ಇತ್ಯಾದಿಯಿಂದ ಗುರುತಿಸಲ್ಪಡುವ ಒಂದು ಕ್ರಿಯೆ.

ಸಾಮಾನ್ಯವಾಗಿ ಮಾರ್ಚ್, ಏಪ್ರಿಲ್ ತಿಂಗಳಲ್ಲಿ ಪರೀಕ್ಷೆಗಳು ಕೊನೆಗೊಂಡು ಮೌಲ್ಯಮಾಪನ ಪ್ರಕ್ರಿಯೆ ಪ್ರಾರಂಭವಾಗುವ ಸಮಯ. ಶಿಕ್ಷಕರಾದ ನಾವೆಲ್ಲರು ವರ್ಷಪೂರ್ತಿ ಪರಿಶ್ರಮದಿಂದ, ಸೃಜನಾತ್ಮಕವಾಗಿ, ಕ್ರಿಯಾಶೀಲರಾಗಿ ಆಯಾಯಾ ವಿಷಯಕ್ಕೆ ತಕ್ಕಂತೆ ವಿದ್ಯಾರ್ಥಿಗಳಲ್ಲಿ ಕೌಶಲ್ಯಗಳನ್ನು ಬೆಳೆಸಿ ಪರೀಕ್ಷೆಗೆ ಅಣಿಮಾಡಿರುತ್ತೇವೆ. ಪರೀಕ್ಷೆಯನ್ನು ಸರಾಗವಾಗಿ ಯಾವುದೇ ಗೊಂದಲಗಳಿಗೆ ಎಡೆ ಮಾಡಿಕೊಡದೇ ಮುಗಿಸುವ ಜವಾಬ್ದಾರಿಯು ನಮ್ಮದೇ ಆಗಿರುತ್ತದೆ. ನಂತರದ ಹಂತ ಮೌಲ್ಯಮಾಪನ. ಇಲ್ಲಿಯೂ ಕೂಡಾ ನಮ್ಮೆಲ್ಲರ ಜವಾಬ್ದಾರಿ ಹೆಚ್ಚಾಗಿರುತ್ತದೆ. ಕಾರಣ ನಾವು 'ಮೌಲ್ಯಮಾಪನ' ಮಾಡುತ್ತಿರುವ ಪತ್ರಿಕೆಗಳು ನಮ್ಮ ವಿದ್ಯಾರ್ಥಿಗಳದ್ದೇ. ಆ ಪತ್ರಿಕೆಗಳು ಯಾವುದೇ ಜಿಲ್ಲೆಗಳಿಂದ ಬಂದದ್ದಾದರೂ ಆ ವಿದ್ಯಾರ್ಥಿಗಳು ನಮ್ಮವರೇ. ಏಕೆಂದರೆ ಅಲ್ಲಿ ಬೋಧಿಸಿ ಮಕ್ಕಳ ಏಳಿಗೆಗೆ ಪರಿಶ್ರಮಿಸಿದ ಶಿಕ್ಷಕರು ನಮ್ಮ ವೃತ್ತಿ ಬಾಂಧವರೇ.

ಮೌಲ್ಯಮಾಪನ ಕರ್ತವ್ಯದಲ್ಲಿ ಶಿಕ್ಷಕರಾದ ನಮಗೆ ಕೆಲವು ಗುರುತರ ಜವಾಬ್ದಾರಿಗಳಿರುತ್ತವೆ. ಯಾವುದೇ ಗೊಂದಲ, ಗಲಿಬಿಲಿ, ಒತ್ತಡ ಇನ್ನಾವುದೋ ಮಾನಸಿಕ, ವೈಯಕ್ತಿಕ ವಿಚಾರಗಳಿಗೆ ಸಿಲುಕದೇ, ನಮ್ಮ ಕರ್ತವ್ಯವನ್ನು ನಿಷ್ಠೆಯಿಂದ ಪೂರ್ಣಗೊಳಿಸಬೇಕು. ಇದು ಈ ವರ್ಷದ ನಮ್ಮ ಪರಿಶ್ರಮದ ಕೊನೆಯ ಹಂತ. ಇಲ್ಲಿ ಕೆಲ ಅಂಶಗಳನ್ನು ನಾವು ಶಿಕ್ಷಕರಾಗಿ ಪಾಲಿಸುವುದು ಅವಶ್ಯಕ.

- ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವಾಗ ಒಬ್ಬ ವಿದ್ಯಾರ್ಥಿಯ ಭವಿಷ್ಯದ ಬಗ್ಗೆ ಆಲೋಚಿಸುವುದು ಅಗತ್ಯ.
- ಶಿಕ್ಷಕರಾದ ನಮಗೆ ನಮ್ಮ ನಮ್ಮ ವಿಷಯದಲ್ಲಿ ಹೆಚ್ಚಿನ, ಪರಿಪೂರ್ಣ ಜ್ಞಾನ ಇದ್ದೇ ಇರುವುದರಿಂದ ಮೌಲ್ಯಮಾಪನಕ್ಕೆ ಬೇಕಾಗಿರುವ ವಿಷಯ ಸಂಬಂಧಿತ ಅಂಶಗಳು ನಮಗೇ ಚೆನ್ನಾಗಿ ತಿಳಿದಿರುವುದರಿಂದ, ಯಾವುದೇ ಒಂದು ಉತ್ತರವನ್ನು ನಿರ್ದಿಷ್ಟ ಎಂದು ತಿಳಿಯದೇ ವಿಷಯದ ಆಳವನ್ನು ತಿಳಿಯುವುದು ಮುಖ್ಯ.
- ಅಂಕಗಳನ್ನು ನಿಗಧಿಪಡಿಸುವಾಗ, ನಮೂದಿಸುವಾಗ ಯಾವುದೇ ದೋಷವಾಗದಂತೆ ನೋಡಿಕೊಳ್ಳುವುದು ನಮ್ಮ ನಿಮ್ಮೆಲ್ಲರ ಹೊಣೆ.

ಈ ಅಂಶವನ್ನು ಹೇಳುವಾಗ ನಮ್ಮ ಸ್ನೇಹಿತೆಯ ಸ್ಥಿತಿ ನೆನಪಾಗುತ್ತದೆ. ಅಂದು ನಮ್ಮೆಲ್ಲರ ಎಸ್.ಎಸ್.ಎಲ್.ಸಿ ಫಲಿತಾಂಶ ಬಂದಾಗ ಚೆನ್ನಾಗಿ ಓದುತ್ತಿದ್ದ ನಮ್ಮ ಸ್ನೇಹಿತೆಗೆ ಗಣಿತದಲ್ಲಿ ಕೇವಲ 17 ಅಂಕಗಳು ಬಂದಿದ್ದವು. ಆಕೆಗೆ ಆತಂಕ, ದುಃಖ. ಮರುಎಣಿಕೆ, ಮೌಲ್ಯಮಾಪನಕ್ಕೆ ಒಳಪಡಿಸಿದಾಗ ತಿಳಿದು ಬಂದದ್ದು ಆಘಾತಕಾರಿ ಅಂಶ. ಆಕೆಗೆ ನೈಜವಾಗಿ ಬಂದದ್ದು 71 ಅಂಕಗಳು. ಇಂತಹ ಸ್ಥಿತಿ ನಮ್ಮ ವಿದ್ಯಾರ್ಥಿಗಳಿಗೆ ಬರದಿರಲಿ ಎಂಬುದೇ ನನ್ನ ಆಶಯ.

- ಮೌಲ್ಯಮಾಪನ ಸಮಯದಲ್ಲಿ ನಮ್ಮ ವೈಯಕ್ತಿಕ ವಿಷಯಗಳು ಯಾವುದೇ ಕಾರಣಕ್ಕೂ ಅಡ್ಡಿಯಾಗದಿರಲಿ.
- ಅಗತ್ಯಕ್ಕಿಂತ ಅವಸರದ ಮೌಲ್ಯಮಾಪನ ನಮ್ಮದಾಗದಿರುವುದು ಉತ್ತಮ.
- ನಿಗದಿತ ಅವಧಿಯಲ್ಲಿ ಹಾಜರಿದ್ದು, ನಮ್ಮ ನಮ್ಮ ಪಾಲಿನ ಮೌಲ್ಯಮಾಪನದ ಕೆಲಸವನ್ನು ಶಾಂತವಾಗಿ, ಸಂಯಮ, ತಾಳ್ಮೆ ಹಾಗೂ ಪ್ರತಿಯೊಂದು ಉತ್ತರ ಪತ್ರಿಕೆಯನ್ನು ಜಾಗರೂಕತೆಯಿಂದ ಮಾಪನ ಮಾಡುವುದು ಅತ್ಯವಶ್ಯ.
- ಯಾವುದೇ ಪೂರ್ವಾಗ್ರಹ ಪೀಡಿತರಾಗದೇ ನಮ್ಮ ಕರ್ತವ್ಯವನ್ನು ಶ್ರದ್ಧೆಯಿಂದ ನಿರ್ವಹಿಸುವುದು ಬಹುಮುಖ್ಯ.
- ಮೌಲ್ಯಮಾಪನದ ಕೆಲಸ ಕೊನೆಗೊಳ್ಳುವವರೆಗೂ ಎಷ್ಟೇ ದಿನಗಳಾದರೂ, ಪ್ರತಿದಿನ ನಮ್ಮ ಪಾಲಿನ ಕೆಲಸವನ್ನು ಹುಮ್ಮಸ್ಸಿನಿಂದ, ಶ್ರದ್ಧೆಯಿಂದ ವಿದ್ಯಾರ್ಥಿಯ ಭವಿಷ್ಯ, ಏಳಿಗೆ ಅದರಲ್ಲಿ ಅಡಕವಾಗಿದೆಯೆಂದು ತಿಳಿದು ಕಾರ್ಯಪ್ರವೃತ್ತರಾಗುವುದು.
- ಬೇರೆ ಯಾವುದೋ ವಿಷಯವನ್ನು ಯೋಚಿಸುತ್ತಾ ಬೇಗ ಕೆಲಸವನ್ನು ಮುಗಿಸುವ ಭರಾಟೆಯಲ್ಲಿ ವಿದ್ಯಾರ್ಥಿಯ ಅಂಕಗಳು ಬಲಿಯಾಗದಿರಲಿ.

ಪುಟ 9 ಕ್ಕೆ ➤

ಭೂರಮೆ

# ಯುಗಾದಿ ಹಬ್ಬಕ್ಕೆ ಸ್ವಾಗತ

■ ನಂ. ನಾಗಲಕ್ಷ್ಮಿ
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು, ಬೆಂಗಳೂರು



ಧರ್ಮ ಮತ್ತು ಸಂಸ್ಕೃತಿ ಒಂದು ನಾಣ್ಯದ ಎರಡು ಮುಖಗಳಂತೆ ಭಾರತದ ಸಾಂಸ್ಕೃತಿಕ ಸಂಪತ್ತನ್ನು ಪ್ರತಿನಿಧಿಸುತ್ತಿರುವ ಸತ್ತ್ವಗಳು, ಮತ್ತು ಇವುಗಳೊಂದಿಗೆ ದೇಶದ ಹಿರಿಮೆಯನ್ನು ಇಡೀ ವಿಶ್ವಕ್ಕೇ ಎತ್ತಿಹಿಡಿದು ಪ್ರಗತಿಯ ಮಾರ್ಗದರ್ಶೀ ಸೂತ್ರವೆಂದು ಸಾರುವಂತಹವು. ಹೀಗೆ, ಅಧ್ಯಾತ್ಮದ ಬೆನ್ನೆಲುಬಿನೊಂದಿಗೇ ತನ್ನ ಸಾಂಸ್ಕೃತಿಕ ಪರಂಪರೆಯನ್ನು ದೃಢವಾಗಿ ಬೆಳೆಸಿಕೊಳ್ಳುತ್ತ ಬಂದಿರುವುದೇ ಭಾರತ ದೇಶದ ವೈಶಿಷ್ಟ್ಯ.

ವೇದ, ಉಪನಿಷತ್ತುಗಳು, ಪುರಾಣಗಳು ಎಲ್ಲವೂ ಅಂತಿಮವೂ, ಮಹತ್ತರವೂ ಆದ ಸತ್ಯವಾದ ಮಾನವಧರ್ಮದ ಪಾಲನೆಯಿಂದಲೇ ಮನುಕುಲದ ಕಲ್ಯಾಣ ಸಾಧ್ಯವೆಂಬುದನ್ನು ನಿರೂಪಿಸುತ್ತದೆ. ಈ ಪ್ರತಿಪಾದನೆಗಾಗಿ ಹಾಗೂ ನಮ್ಮ ಧಾರ್ಮಿಕ, ಸಾಂಸ್ಕೃತಿಕ ಸಮೃದ್ಧ ಸಂಪತ್ತನ್ನು ರಕ್ಷಿಸುವ ಉದ್ದೇಶದಿಂದಲೇ ನಮ್ಮ ಹಿರಿಯರು ವರ್ಷವಿಡೀ ಹತ್ತಾರು ಹಬ್ಬಗಳನ್ನು ಆಚರಿಸುತ್ತ ಬಂದರು. ವೈವಿಧ್ಯಮಯ ಭಾಷೆ, ಸಂಪ್ರದಾಯ, ಸಂಸ್ಕೃತಿಗಳಿಗೆ ತಕ್ಕಂತೆ ದೇಶದಾದ್ಯಂತ ಹೀಗೆ ಆಚರಣೆಗೊಳ್ಳುವ ಹಬ್ಬಗಳ ಸಂಖ್ಯೆಯೂ ನಮ್ಮಲ್ಲಿ ಅಪಾರವಾಗಿದೆ. ಹಾಗಾಗಿ ಪರಂಪರೆಯಿಂದ ಬಂದ ಎಲ್ಲ ಆಚರಣೆಗಳೂ ಬದಲಾದ ಕಾಲಘಟ್ಟಗಳಲ್ಲಿಯೂ ನಿರಂತರವಾಗಿ ಒಂದಷ್ಟು ಸೇರ್ಪಡೆಯೋ ಅಥವಾ ಒಂದಷ್ಟು ಬದಲಾವಣೆಯೋ ಆಗುತ್ತಾ ನಡೆಯುತ್ತಲೇ ಬಂದಿವೆ.

ಹಿಂದೂ ಪಂಚಾಂಗದ ಪ್ರಕಾರ ಚೈತ್ರಮಾಸ ನಮಗೆ ವರ್ಷದ ಮೊದಲ ತಿಂಗಳು. ಪ್ರಾರಂಭದಲ್ಲಿಯೇ ಸೃಷ್ಟಿಯ ಚೆಲುವನ್ನೆಲ್ಲಾ ಮುಂದೆ ಹರಡಿ ಹರ್ಷ ತುಂಬುವ ವಸಂತ ಋತು ಈ ಮಾಸ ದಲ್ಲಿಯೇ ಅಡಿ ಇಡುತ್ತದೆ. ಶಿಶಿರಋತು ಗಿಡ ಮರಗಳಿಂದ ಎಲೆಗಳನ್ನೆಲ್ಲ ಉದುರಿಸಿದ್ದರೆ ವಸಂತದಲ್ಲಿ ಎಲ್ಲ ಕಡೆ ಚಿಗುರಿನ ಸಂಭ್ರಮವನ್ನು ಕಾಣುತ್ತೇವೆ. 'ವಸಂತ ಬಂದ ಋತುಗಳ ರಾಜ ತಾ ಬಂದ' ಎಂಬ ಕವಿಗೀತೆಯಲ್ಲಿ ಹೇಳಿರುವಂತೆ ಪ್ರಕೃತಿಮಾತೆ ಹಸಿರು ವಸ್ತ್ರಧಾರಿಣಿಯಾಗಿ, ಚೈತನ್ಯದಾಯಿನಿಯಾಗಿ ಕಂಗೊಳಿಸು ತ್ತಾಳೆ. ಸಕಲ ಜೀವರಾಶಿಗಳಲ್ಲಿ ಈ ಬದಲಾವಣೆ ಸಂತಸವನ್ನು ಉಂಟುಮಾಡುತ್ತದೆ. ಹೀಗೆ ಎಲ್ಲ ಜೀವರಾಶಿಗಳಲ್ಲಿ ನವೋತ್ಸಾಹವನ್ನು, ನವಚೈತನ್ಯವನ್ನು ತುಂಬುತ್ತ, ಪ್ರಕೃತಿಯ ಶುಭಕರವಾದ, ಮನೋಹರವಾದ ಸಂಕೇತಗಳೊಡನೆ ಕಾಲಿಡುವುದೇ ವರ್ಷದ ಮೊದಲ ಹಬ್ಬವೆನಿಸುವ ಯುಗಾದಿ ಹಬ್ಬ. ಚೈತ್ರ ಶುದ್ಧ ಪಾಡ್ಯಮಿಯ ದಿನವೇ ಯುಗಾದಿಯ ಸಂಭ್ರಮ. ಈ ದಿನದಿಂದಲೇ ಹಿಂದೂಗಳ ವರ್ಷ ಆರಂಭ. ಬ್ರಹ್ಮನು ಈ ಜಗತ್ತನ್ನು ಚೈತ್ರಶುದ್ಧ ಪ್ರಥಮೆಯ ದಿನ ಸೂರ್ಯೋದಯದ ಕಾಲಕ್ಕೆ ಸಮಗ್ರವಾಗಿ ಸೃಷ್ಟಿಸಿದನೆಂದೂ ಅಂದಿನಿಂದ ಕಾಲಗಣನೆಗಾಗಿ ಗ್ರಹ, ನಕ್ಷತ್ರ, ಋತು, ಮಾಸಾದಿ ಗಳನ್ನು ನಿಯೋಜಿಸಿದನೆಂದೂ ಪುರಾಣಗಳಲ್ಲಿ ತಿಳಿದು ಬರುತ್ತದೆ.

ಕರ್ನಾಟಕ, ಆಂಧ್ರ, ತಮಿಳುನಾಡು ರಾಜ್ಯಗಳಲ್ಲಿ ಯುಗಾದಿ ಯೆಂದು ಸಂಭ್ರಮಿಸಿದರೆ, ಮಹಾರಾಷ್ಟ್ರದಲ್ಲಿ 'ಗುಡಿಪಾಡ್ವ' ಎಂದು ಆಚರಿಸುತ್ತಾರೆ. ಕೇರಳದಲ್ಲಿ 'ವಿಷು' ಹಬ್ಬವೆನ್ನುತ್ತಾರೆ. ತಮಿಳುನಾಡಿನಲ್ಲಿ ಇದನ್ನೇ 'ಪುತ್ತಾಂಡು' ಹಬ್ಬವೆಂದೂ ಕರೆಯುತ್ತಾರೆ. ರಾಜಾಸ್ಥಾನದಲ್ಲಿ 'ತಪ್ನಾ' ಎಂದೂ, ಸಿಂಧಿಗಳು 'ಚೇಟ್‌ಚಂದ್' ಎಂದೂ ಹೊಸವರ್ಷದ ಮೊದಲ ದಿನವನ್ನು ಸ್ವಾಗತಿಸುತ್ತಾರೆ. ಹರ್ಷದಾಯಕವಾದ ಪ್ರಾರಂಭೋತ್ಸವನ್ನು ಆಚರಿಸುವುದರೊಂದಿಗೆ ಹೊಸ ಹೊಸ ಸಂಕಲ್ಪಗಳನ್ನು ಮಾಡಿ ಅದನ್ನೆಲ್ಲ ಕಾರ್ಯಗತಗೊಳಿಸುವ ದಾರಿಯಲ್ಲಿ ಹಂತಹಂತವಾಗಿ ಮುನ್ನಡೆಯಲು ಪ್ರಯತ್ನಿಸಬೇಕೆಂಬುದೇ ಈ ವರ್ಷಾರಂಭದ ಸಂಭ್ರಮದ ಹಿನ್ನೆಲೆಯಲ್ಲಿರುವ ಉದ್ದೇಶ.

**ಹೊಸ ಹೊಸಬನಾಗುವನನುಕ್ಷಣಂ ಮಾನವನು।**
**ವಸುಧೆಯಾ ಮೂಸೆಯಲಿ ಪುಟಪಾಕವಾಂತು॥**
**ರಸಮೂರ್ತಿಯಾಗುವನು ಜಗದಾತ್ಮಮತಿ ಬೆಳೆಯೆ।**
**ಕಸವೆಲ್ಲ ಕಳೆದವನು– ಮಂಕುತಿಮ್ಮ**

ಈ ಹೊಸತನ ಎಂಬುದು ಕೇವಲ ಬಾಹ್ಯಗೋಚರವಷ್ಟೇ ಆಗಬಾರದು. ಹೊರಗಿನ ಆ ಬದಲಾವಣೆ, ಹೊಸತನ ನಮ್ಮೊಳಗಿನ ಹಳೆಯದನ್ನು, (ಬೇಡವಾದುದನ್ನು) ಕಳೆಯನ್ನು ಕಿತ್ತೊಗೆಯುವ ಕಾರ್ಯವನ್ನೂ ಮಾಡುವಂತಾಗಬೇಕು. ಅಂದರೆ, ಹೊಸ ಬಗೆಯ ಚಿಂತನೆಗಳು, ಕಾಲದ ಜೊತೆ ಜೊತೆಗೆ, ಅವಶ್ಯಕತೆಗಳಿಗೆ ತಕ್ಕಂತೆ ಸುಧಾರಣೆಯ, ಪ್ರಗತಿಯ ದಾರಿಯಲ್ಲಿ ಮುನ್ನಡೆಸು ವಂತಿರಬೇಕು.

ನಿಂತ ನೀರು ಎಂದಿಗೂ ಆರೋಗ್ಯಕರವಲ್ಲ. ಹರಿಯುತ್ತಿರುವ ನೀರು ಹೊಸಹೊಸ ದಾರಿಗಳನ್ನು ಹುಡುಕುತ್ತ ಎದುರಾಗುವ ಅಡೆತಡೆಗಳನ್ನು ನಿವಾರಿಸಿಕೊಳ್ಳುತ್ತ ಅಂಕು ಡೊಂಕಿನ ದಾರಿಯಲ್ಲಿ ಸಾಗುತ್ತ, ಧುಮುಕುತ್ತ ಮುಂದೆ ಮುಂದೆ ಸಾಗುತ್ತದೆ. ದಾರಿಗೆ ತಕ್ಕಂತೆ ಅದರ ಪಾತ್ರವೂ ಬದಲಾಗುತ್ತ ಹೋಗುತ್ತದೆ. ನಾವಾದರೂ ಅಷ್ಟೇ ತಾನೆ? ಶೈಶವ, ಬಾಲ್ಯ, ಯೌವ್ವನ ಮುಂತಾದ ಅವಸ್ಥೆಗಳಲ್ಲಿ ಅದಕ್ಕೆ ತಕ್ಕಂತೆ ನಮ್ಮ ಮನೋಧರ್ಮವೂ ಬದಲಾಗುತ್ತದೆ. ಹಾಗೆಯೇ ಜೀವನದ ಎಲ್ಲ ರಂಗಗಳಲ್ಲಿಯೂ ಇದು ಅತ್ಯಗತ್ಯ. ಧಾರ್ಮಿಕ, ಸಾಮಾಜಿಕ, ರಾಜಕೀಯ ಎಂಬ ಎಲ್ಲ ಕ್ಷೇತ್ರ

ಪುಟ 8 ಕ್ಕೆ ➤

➢ ಪುಟ 8 ರಿಂದ..... ಯುಗಾದಿ...

ಗಳಲ್ಲಿಯೂ ಕಾಲ ಕಾಲಕ್ಕೆ ಈ ಸ್ಥಿತ್ಯಂತರವೆಂಬುದು ನಡೆದೇ ಇದೆ. ಬೇರೆ ಬೇರೆ ಕಾಲಘಟ್ಟಗಳಲ್ಲಿ ಬೇರೆ ಬೇರೆ ಮತ ಧರ್ಮಗಳ ಸ್ಥಾಪನೆ, ಸಾಮಾಜಿಕ ವ್ಯವಸ್ಥೆಯಲ್ಲಿ ಬದಲಾವಣೆ, ರಾಜಕೀಯ ಆಡಳಿತ ವ್ಯವಸ್ಥೆಯಲ್ಲಿ ಬದಲಾವಣೆ ಎಲ್ಲವೂ ಪ್ರಕೃತಿಯ ಈ ಸಹಜ ನಿಯಮಕ್ಕೆ ಒಳಪಟ್ಟು ನಡೆದಿದೆ, ನಡೆಯುತ್ತಿದೆ, ಮತ್ತು ಮುಂದೆಯೂ ಹೀಗೆ ಬದಲಾಗುತ್ತಲೇ ಇರುತ್ತದೆ. ಅದು ಅನಿವಾರ್ಯ ಕೂಡ.

ಬದಲಾವಣೆಗಳಿಗೆ ತೆರೆದುಕೊಳ್ಳುವಾಗ ಎದುರಾಗುವ ಎಲ್ಲ ಒಳಿತು–ಕೆಡಕುಗಳನ್ನು ಸಮುಸ್ಥಿತಿಯಿಂದ ಸ್ವೀಕರಿಸುವ ಮನೋಭಾವ ಅಗತ್ಯ. ಜೊತೆಗೆ ಸಕಾರಾತ್ಮಕ ಬದಲಾವಣೆಯನ್ನು ತಂದುಕೊಳ್ಳಬೇಕೆಂಬ ಗಟ್ಟಿ ನಿರ್ಧಾರ ಹಾಗೂ ಅದನ್ನು ಫಲಪ್ರದವಾಗಿಸಲು ಪ್ರಾಮಾಣಿಕ ಪ್ರಯತ್ನ ಎರಡೂ ಅಷ್ಟೇ ಮುಖ್ಯವೆನಿಸುತ್ತದೆ. ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವಲ್ಲಿ ಪ್ರತಿಯೊಬ್ಬ ವ್ಯಕ್ತಿಯಲ್ಲಿ ಸಾಮಾಜಿಕ ಪ್ರಜ್ಞೆ ಜಾಗೃತಿಗೊಳ್ಳಬೇಕು. ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವಲ್ಲಿ ಸಮರ್ಥ ನಾಯಕತ್ವದ ಅರಸುವಿಕೆಯಲ್ಲಿ ಕೂಡ ಹೊಣೆಗಾರಿಕೆಯನ್ನು ನಿರ್ವಹಿಸಬೇಕಾಗುತ್ತದೆ. ಪ್ರಜ್ಞಾವಂತಿಕೆಯ ಬೆಂಬಲದೊಂದಿಗೆ ಹೊಸತನದ ಹರಿಕಾರರನ್ನು ಪತ್ತೆ ಹಚ್ಚುವ ಕಾರ್ಯವನ್ನು ಮಾಡಬೇಕಾಗುತ್ತದೆ. ಇದು ಒಮ್ಮೆಗೇ ನಡೆಯುವ ಕಾರ್ಯವಲ್ಲ. ಹಂತ ಹಂತವಾಗಿ, ಮತ್ತೆ ಮತ್ತೆ ಪರಿಷ್ಕರಿಸುವುದರೊಂದಿಗೆ, ನಿಸ್ವಾರ್ಥಮನದಿಂದ, ಸಮಾಜದ ಇನ್ನೂ ಬಿಡಿಸಿ ಹೇಳಬೇಕೆಂದರೆ ನಾಡಿನ, ದೇಶದ ಏಳಿಗೆಯನ್ನು, ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾತೃಭೂಮಿಯನ್ನು ಕುರಿತು ಅಭಿಮಾನದ, ಗೌರವದ ಭಾವನೆಯನ್ನು ಬೆಳೆಸಿಕೊಂಡು ನಮಗೆ ಬೇಕಾದ ನೇತಾರರನ್ನು ಅರಸುವುದು ಅತ್ಯಂತ ಎಚ್ಚರಿಕೆಯಿಂದ ನಡೆಯಬೇಕಾದ ಕಾರ್ಯ.

'ಯುಗಾದಿ' ಯೆಂಬ ಹೊಸ ವರ್ಷವನ್ನು ಬರಮಾಡಿಕೊಳ್ಳುತ್ತಲೇ ಭವಿಷ್ಯದ ದಿನಗಳಲ್ಲಿ ಎಲ್ಲ ಬಗೆಯ ಹೊಸತನವನ್ನು ತುಂಬುವ ಕಾರ್ಯ ಪ್ರತಿಯೊಬ್ಬ ವ್ಯಕ್ತಿಯ ಹೊಣೆಯಾಗಿರುತ್ತದೆ. ಹಬ್ಬಗಳ ಆಚರಣೆಯೆಂಬುದು ನಮ್ಮ ಜೀವನದ ಎಲ್ಲ ಆಗುಹೋಗುಗಳೊಂದಿಗೆ ಸಂಬಂಧವನ್ನು ಹೊಂದಿರುತ್ತದೆ. ಅಷ್ಟೇ ಅಲ್ಲ, ಪ್ರಾಕೃತಿಕ ಬದಲಾವಣೆಗಳನ್ನೂ ಅವಲಂಬಿಸಿಕೊಂಡೇ ನಮ್ಮ ಹಿರಿಯರು ಈ ಹಬ್ಬಗಳನ್ನು ಆಚರಿಸುವ ಸಂಪ್ರದಾಯವನ್ನು ರೂಪಿಸಿರುತ್ತಾರೆ. ಅದೇ ರೀತಿ ಯುಗಾದಿಯ ಸಂಭ್ರಮವು ಎದುರಾಗಲಿರುವ ಸೂಚನೆಗಳು ಕೆಲವು ತಿಂಗಳುಗಳ ಮುನ್ನವೇ ನಮಗೆ ದೊರೆಯುತ್ತವೆ. ಪ್ರಕೃತಿ ತನ್ನ ಸಿದ್ಧತೆಯನ್ನು ಸರಿಯಾಗಿ ಮಾಡಿಕೊಂಡೇ ತನ್ನ ಒಂದೊಂದೇ ವೈಶಿಷ್ಟ್ಯವನ್ನು ಪ್ರದರ್ಶಿಸುತ್ತದೆ.

ಪ್ರಕೃತಿಯು ಕಲಿಸುವ ಪಾಠ ಅದ್ಭುತವಾದುದು. ತರ್ಕ ಮತ್ತು ಪ್ರಯೋಗ ಎರಡನ್ನೂ ನಮ್ಮ ಮುಂದಿಟ್ಟು ಬದುಕಿನ ಸಮಗ್ರ ವಿವರಣೆಯನ್ನು ಅದು ನೀಡುತ್ತದೆ. ಅಂತೆಯೇ ಪ್ರತಿಯೊಬ್ಬ ವ್ಯಕ್ತಿ ತನ್ನ ಸಾಮಾಜಿಕ ಬದ್ಧತೆಯನ್ನು ಅರಿತು ಅದರ ಕಾರ್ಯಾಚರಣೆಯಲ್ಲಿ ತೊಡಗುವಾಗ ಪೂರ್ವಾಪರ ಚಿಂತನೆಯೊಂದಿಗೆ ಮುನ್ನಡೆಯುವುದು ಅವಶ್ಯಕ. ರುಚಿಕರವಾದ ಗುಣಮಟ್ಟದ ಫಲಗಳನ್ನು ಸೇವಿಸುವ ಅಪೇಕ್ಷೆ ಎಲ್ಲರಿಗೂ ಇರುತ್ತದೆ. ಸಮೃದ್ಧಿಯಾದ ಫಸಲನ್ನು ನಿರೀಕ್ಷಿಸುವ ಆಸೆ ಎಲ್ಲರಿಗೂ ಸಹಜ. ಆದರೆ ಕೇವಲ ಆಸೆ, ಅಪೇಕ್ಷೆಗಳಿಂದಷ್ಟೇ ಫಲಿತಾಂಶ ದೊರಕುವುದಿಲ್ಲವಲ್ಲ? ಭೂಮಿತಾಯಿ ತನ್ನನ್ನು ಸರಿಯಾಗಿ ನೋಡಿಕೊಂಡರೆ ಅದಕ್ಕೆ ತಕ್ಕಂತೆ ಪ್ರತಿಫಲ ನೀಡುತ್ತದೆ. ನಮ್ಮ ಕಾರ್ಯವೂ ಪ್ರಾರಂಭವಾಗಿದೆ. ನೆಲವನ್ನು ಉತ್ತು–ಬಿತ್ತು ಹದಮಾಡಿ ಉತ್ತಮ ತಳಿಯ ಬೀಜಗಳನ್ನು ಹಾಕುವುದರೊಂದಿಗೆ ಕೃಷಿಕನ ಪ್ರಾಥಮಿಕ ಹಂತದ ನಡೆ ಆಗಿದೆ. ಮೊಳಕೆಯೊಡೆದು ಸಸಿಗಳಾಗಿ ಅಲ್ಲಲ್ಲಿ ಬೆಳೆದ ಕಳೆಗಳನ್ನು ಕಿತ್ತೊಗೆಯುವ ಕಾರ್ಯವೂ ನಡೆದಿದೆ. ಕಾಲಕಾಲಕ್ಕೆ ಅಗತ್ಯವಾದ ನೀರು, ಗೊಬ್ಬರ ಮುಂತಾದುವನ್ನು ಒದಗಿಸಬೇಕು. ಆರೋಗ್ಯಕರವಾಗಿ ಬೆಳೆಯುತ್ತ, ಬಲಿಷ್ಠವಾಗುತ್ತ, ದುಷ್ಟಕೀಟಗಳ, ಪ್ರಾಣಿಗಳ ಆಕ್ರಮಣದಿಂದ ತಪ್ಪಿಸಿಕೊಳ್ಳುತ್ತ ಹೊರವಾಗಿ ಬೆಳೆದು ನಿಂತ ಮರಗಿಡಗಳು ತಮ್ಮ ಕೃತಜ್ಞತಾ ಸಮರ್ಪಣೆಯೆಂದೋ, ಕರ್ತವ್ಯ ನಿರ್ವಹಣೆಯೆಂದೋ ಸ್ವಾದಿಷ್ಟವೂ, ಸಮೃದ್ಧಿಯೂ ಆದ ಫಲಗಳನ್ನು ನೀಡಲು ಅಗತ್ಯವಾದ ಎಲ್ಲ ಸಹಕಾರಗಳನ್ನು ಕೃಷಿಕನಾದವನು ನೀಡಬೇಕು.

**ಪೊಸರಸಂ ಬೇರಿಗನುದಿನಮಾದವಿ ಧರೆಯಿಂದ।**
**ಸಸಿಗೆ ಹೊಸತಳಿರ ತಲೆಯಲಿ ಮುಡಿಸುವಂತೆ॥**
**ಹೊಸಸೃಷ್ಟಿ ಸತ್ತ್ವಮೆತ್ತಣಿನೊ ಬರುತನುದಿನಂ।**
**ಪೊಸತಾಗಿಪುದು ಜಗವ– ಮಂಕುತಿಮ್ಮ**

ಹೊಸವರ್ಷವನ್ನು ಹೆಚ್ಚಿನ ಪ್ರಮಾಣದ ಬೆಲ್ಲದೊಂದಿಗೆ ಸ್ವಾಗತಿಸೋಣ. ●

---

➢ ಪುಟ 7 ರಿಂದ..... ಮೌಲ್ಯಮಾಪನ...

- ಮೌಲ್ಯಮಾಪನ ಕಾರ್ಯದಲ್ಲಿ ಪ್ರತಿ ಹಂತವು ಅತೀ ಮುಖ್ಯ ಮತ್ತು ಅತೀ ಅಮೂಲ್ಯವಾದುದು ಎಂಬುದನ್ನು ನಾವೆಲ್ಲರೂ ತಿಳಿಯೋಣ.

'ಮೌಲ್ಯಮಾಪನ' ಕರ್ತವ್ಯ ಕೊನೆಯ ಹಂತದ ವಿದ್ಯಾರ್ಥಿಗಳ ಭವಿಷ್ಯವನ್ನು ನಿರ್ಧರಿಸುವಂತಹ, ಅವರ ಮುಂದಿನ ಕಲಿಕೆಗೆ ಪೂರಕವಾಗುವಂತಹ ಇಲ್ಲಿನ ತಪ್ಪುಗಳನ್ನು ತಿಳಿದು ಮುಂದಿನ ಭವಿಷ್ಯತ್‌ಗಾಗಿ ಕನಸನ್ನು ಕಟ್ಟುವ ಪ್ರಮುಖ ಬಹುಮುಖ್ಯವಾದ ಮಜಲು.

ಶಿಕ್ಷಕರಾದ ನಾವು ವರ್ಷವಿಡೀ ಅವರ ಏಳಿಗೆಗೆ ಶ್ರಮಿಸುತ್ತೇವೆ. ವಿದ್ಯಾರ್ಥಿಗಳ ಯಶಸ್ಸಿನಲ್ಲಿ ನಮ್ಮ ಸಂತೋಷವನ್ನು ಕಾಣುತ್ತೇವೆ. ಇಂತಹ ಸಮಯದಲ್ಲಿ ಯಾವುದೇ ಕಾರಣಕ್ಕೂ ನಮ್ಮನ್ನು ನಾವು ಗೊಂದಲ, ಆತಂಕ, ಸಂಶಯಗಳಿಗೆ ಸಿಲುಕಿಸದೇ ಎಚ್ಚರಿಕೆಯಿಂದ ಈ ವರ್ಷವೂ ಮೌಲ್ಯಮಾಪನ ಕರ್ತವ್ಯಕ್ಕೆ ಹಾಜರಾಗಿ ಯಶಸ್ವಿಯಾಗಿ ಪೂರ್ಣಗೊಳಿಸೋಣ. ●

➢ ಪುಟ 5 ರಿಂದ..... ಸಂಘಟಿತ ಶಕ್ತಿಯ ಅಗತ್ಯ...

ಆರಂಭವಾಗಿದೆ. ಇಡೀ ವಿಶ್ವದ ಗಮನ ಭಾರತದ ಮೇಲಿದೆ. ಭಾರತವನ್ನು ಸರ್ವಾಂಗೀಣವಾಗಿ ಬಲಾಢ್ಯಗೊಳಿಸಿರುವ ನರೇಂದ್ರ ಮೋದಿಯತ್ತ ವಿಶ್ವದ ದೃಷ್ಟಿ ನೆಟ್ಟಿದೆ. ಆದರೆ ವಿಪರ್ಯಾಸ ಎಂಬಂತೆ ಭಾರತದ ಎಲ್ಲಾ ರಾಜಕೀಯ ವಿರೋಧ ಪಕ್ಷಗಳು ಒಂದಾಗಿ 'ಮಹಾಘಟಬಂಧ' ರಚಿಸಿಕೊಂಡು ರಾಜಕೀಯ ಚದುರಂಗದ ದಾಳ ಬಳಸುತ್ತಿದ್ದರೆ ಇತ್ತ ಭಯೋತ್ಪಾದನೆಯನ್ನು ಬುಡಸಮೇತ ಕಿತ್ತು ಹಾಕುವ ಮಹಾಸಂಕಲ್ಪಕ್ಕೆ ಮುನ್ನುಡಿ ಬರೆದು, ಭಯೋತ್ಪಾದನೆಯನ್ನು ವಿಶ್ವ ಭೂಪಟದಿಂದ ಅಳಿಸಿಹಾಕಲು ಘಟಾನುಘಟಿ ಅಂತರಾಷ್ಟ್ರೀಯ ನಾಯಕರ ಘಟಬಂಧ ರಚಿಸಿರುವ ಮೋದಿಯವರ ರಾಜಕೀಯ ಇಚ್ಛಾಶಕ್ತಿಯನ್ನು ನಾವೆಲ್ಲಾ ಮೆಚ್ಚಲೇಬೇಕು. ವ್ಯಕ್ತಿ ಮತ್ತು ಪಕ್ಷದ ಹಿತಕ್ಕಿಂತ ರಾಷ್ಟ್ರದ ಹಿತ ಮುಖ್ಯ ಎಂಬುದು ಮೋದಿಯವರ ದೂರದೃಷ್ಟಿ. ಜಗತ್ತಿನ ಯಾವುದೇ ಮಹತ್ತರ ಅಂಶಕ್ಕೆ ಸಂಬಂಧಿಸಿದಂತೆ ಭಾರತದ ನಿಲುವೇನು? ಎಂಬುದನ್ನು ಜಗತ್ತಿನ ನಾಯಕರೆಲ್ಲರು ಕುತೂಹಲದಿಂದ ಕಾಯುವ ಪರಿಸ್ಥಿತಿ ಸದ್ಯ ಅಂತರಾಷ್ಟ್ರೀಯ ಮಟ್ಟದಲ್ಲಿ ಭಾರತಕ್ಕೆ ಸಿಕ್ಕ ಬಹುದೊಡ್ಡ ಸ್ಥಾನ.

"ಭಯೋತ್ಪಾದನೆಯ ವಿರುದ್ಧ ಇಡೀ ವಿಶ್ವವನ್ನು ಒಂದುಗೂಡಿಸಿದ ನರೇಂದ್ರ ಮೋದಿಯವರಿಗೆ ವಿಶ್ವ ಯಾವಾಗಲೂ ಕೃತಜ್ಞರಾಗಿರುತ್ತದೆ" ಎಂದು ಅಮೇರಿಕಾ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಅಭಿಪ್ರಾಯಪಟ್ಟಿದ್ದಾರೆ.

"ಉಗ್ರಗಾಮಿಗಳನ್ನು ಮಟ್ಟ ಹಾಕುತ್ತಿರುವ ಭಾರತದ ಸಹಾಯಕ್ಕೆ ಹಗಲಿರುಳು ಸಿದ್ಧ" ಎಂದು ರಷ್ಯಾದ ಅಧ್ಯಕ್ಷ ಪುಟಿನ್ ಘೋಷಿಸಿದ್ದಾರೆ.

ಇತ್ತೀಚಿನ ಈ ಎಲ್ಲಾ ಬೆಳವಣಿಗೆಗಳ ಹಿನ್ನೆಲೆಯಲ್ಲಿ ರಾಷ್ಟ್ರದ ಎಲ್ಲಾ ರಾಜಕೀಯ ಪಕ್ಷಗಳು, ಪಕ್ಷಬೇಧ ಮರೆತು ಸಂಘಟಿತವಾಗಿ ರಾಷ್ಟ್ರದ ಅಭಿವೃದ್ಧಿ ಮತ್ತು ಸುರಕ್ಷತೆಯ ಬಗ್ಗೆ ಗಮನ ಹರಿಸುವುದು ಅನಿವಾರ್ಯವಾಗಿದೆ.

ಭಾರತವನ್ನು ಸದೃಢ ರಾಷ್ಟ್ರವನ್ನಾಗಿಸುವ ಆಶಯಕ್ಕೆ ಬದ್ಧರಾಗೋಣ, ಸ್ವಚ್ಛ ಭಾರತವನ್ನಾಗಿ ಮನ್ವಂತರಗೊಳಿಸೋಣ. ಪ್ರತಿಹಳ್ಳಿಗೊಂದು ಶಾಲೆ, ಬಾಹ್ಯಾಕಾಶ ವಿಜ್ಞಾನದಲ್ಲಿ ಸಾಧನೆ, ಸರ್ವರಿಗೂ ಬ್ಯಾಂಕ್ ಖಾತೆ, ಪೋಲಿಯೋ ಮುಕ್ತ ಭಾರತ, ಹಳ್ಳಿಗಳ ವಿದ್ಯುಚ್ಛಕ್ತೀಕರಣದ ಪಾಲುದಾರರಾಗಿ, ಪ್ರಜ್ಞಾವಂತ ನಾಗರೀಕರಾಗಿ ' ನವಭಾರತ' ಹೊಸಭಾರತ, ಉತ್ಸಾಹಭರಿತ ಭಾರತದ ಸಂಕಲ್ಪದಿಂದ ಸಿದ್ಧಿಯೆಡೆಗೆ ಕಾರ್ಯಪ್ರವೃತ್ತರಾಗೋಣ. ಸ್ವಾಮಿ ವಿವೇಕಾನಂದರ ಆಶಯದಂತೆ "ಯುವ ಜನತೆಯನ್ನು ದೇಶಕ್ಕಾಗಿ ಬದುಕುವಂತೆ ಪ್ರೇರೇಪಿಸೋಣ". ಪಕ್ಷಬೇಧ ಮರೆತು ರಾಷ್ಟ್ರದ ಹಿತಾಸಕ್ತಿಯ ದೃಷ್ಟಿಯಿಂದ ಸಂಘಟಿತರಾಗಿ ಮುಂಬರುವ ಲೋಕಸಭೆ ಚುನಾವಣೆಯಲ್ಲಿ ತಪ್ಪದೇ ಭಾಗವಹಿಸಿ, ತಪ್ಪದೇ ಮತದಾನ ಮಾಡಿ, ಅತ್ಯುತ್ತಮ ನಾಯಕರನ್ನು ಆರಿಸಿ ಸದೃಢ ಭಾರತ ನಿರ್ಮಾಣದ, ಕನಸನ್ನು ನನಸು ಮಾಡುತ್ತೇವೆಂದು ಪ್ರತಿಜ್ಞಾವಿಧಿ ಸ್ವೀಕರಿಸೋಣ.

●


## ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ ಪತ್ರಿಕೆಯ ಪ್ರಾರೂಪ

(ಪ್ರಾರೂಪ 8, ವಿಧಿ 8)

| | |
|---|---|
| ಪ್ರಕಟಣೆಯ ಸ್ಥಳ | : ನಂ.55, ಯಾದವಸ್ಮೃತಿ, 1ನೇ ಮುಖ್ಯರಸ್ತೆ, ಬೆಂಗಳೂರು–560020 |
| ಪ್ರಕಾಶಕ | : ಪ್ರಧಾನ ಕಾರ್ಯದರ್ಶಿ ಕರ್ನಾಟಕ ರಾಜ್ಯ ಸೆಕೆಂಡರಿ ಶಿಕ್ಷಕ ಸಂಘ (ರಿ.) |
| ಮಾಲೀಕತ್ವ | : ಕರ್ನಾಟಕ ರಾಜ್ಯ ಸೆಕೆಂಡರಿ ಶಿಕ್ಷಕ ಸಂಘ (ರಿ.) ನಂ.55, ಯಾದವಸ್ಮೃತಿ, 1ನೇ ಮುಖ್ಯರಸ್ತೆ, ಬೆಂಗಳೂರು–560020 |
| ಸಂಪಾದಕ | : ಪ್ರಧಾನ ಕಾರ್ಯದರ್ಶಿ (ಮೇಲಿನದೇ ವಿಳಾಸ) |
| ಭಾರತದ ಪ್ರಜೆಯೇ | : ಹೌದು |
| ಮುದ್ರಕ | : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು – 560 019 |

ಮೇಲೆ ಕೊಟ್ಟಿರುವ ವಿಷಯಗಳು ನನ್ನ ನಂಬಿಕೆಯಲ್ಲಿ ಪೂರ್ಣ ಸತ್ಯವೆಂದು ನಾನು ಘೋಷಿಸುತ್ತೇನೆ.

ಬೆಂಗಳೂರು (ಸಹಿ) ಪ್ರಧಾನ ಕಾರ್ಯದರ್ಶಿ
1.3.2019 ಪ್ರಕಾಶಕ


## ಹೈಟೆಕ್ ಕುಂಭ, ಸ್ವಚ್ಛ ಕುಂಭ ಇತಿಹಾಸ ಸೃಷ್ಟಿಸಿದ ಭಕ್ತ ಸಂಗಮ



- ಹಾರ್ವಡ್ ವಿವಿಯಿಂದ ಅಧ್ಯಯನ ವಸ್ತುವಾಗಿ ಆಯ್ಕೆ
- 1000 ಸಿಸಿ ಟಿವಿ ಕ್ಯಾಮೆರಾ ಕಣ್ಗಾವಲು, 10000 ಟೆಂಟ್‌ಗಳ ಹತ್ತು ನಗರಗಳು, 4000 ಕಾಮನ್ ಟೆಂಟ್‌ಗಳು, ಹೆಲಿ ಟೂರಿಸಮ್
- ಗಂಗಾನದಿಯ ಮೇಲೆ 24 ವಿಶೇಷ ಸೇತುವೆಗಳು, 115 ವಿಶೇಷ ರಸ್ತೆಗಳು, ತೆಪ್ಪದಲ್ಲೇ ತೇಲುವ ಎಟಿಎಂ, ಜಿಪಿಎಸ್ ಅಳವಡಿಸಿರುವ 500 ಫ್ರೀ ಶಟಲ್ ಬಸ್‌ಗಳು, 2000 ಉಚಿತ ಆಟೋ ರಿಕ್ಷಾಗಳು
- 50 ದಿನಗಳ ಸಾಂಸ್ಕೃತಿಕ ಕಾರ್ಯಕ್ರಮಕ್ಕಾಗಿ ವಿಶೇಷ ಲೇಸರ್ ಲೈಟ್ ಪ್ರದರ್ಶನ

# ನೋಟಾ (NOTA) ದೆಡೆಗೆ ಒಂದು ನೋಟ




ಪ್ರಜಾಪ್ರಭುತ್ವದ ನೆಲೆಗಟ್ಟಿನ ದೇಶ ಭಾರತ. ದೇಶದ ಭವಿಷ್ಯವನ್ನು ಸೂಕ್ತ ಕೈಗಳಿಗೆ ಒಪ್ಪಿಸುವ ಪ್ರಕ್ರಿಯೆಯಾದ ಲೋಕಸಭಾ ಚುನಾವಣೆಗೆ ಮತದಾರ ಸಜ್ಜಾಗುತ್ತಲಿದ್ದಾರೆ. ಇನ್ನೆರಡು ತಿಂಗಳಲ್ಲಿ ರಾಜಕೀಯ ಪಕ್ಷಗಳಿಗೆ ಜನರ ನಾಡಿ ಮಿಡಿತ ತಿಳಿಯಲಿದೆ. ಅಲ್ಲಿಯ ತನಕ ರಾಜಕೀಯ ಪ್ರಹಸನಗಳು, ಕೆಸರೆರಚಾಟ ತೀವ್ರಗೊಳ್ಳುತ್ತಲಿದೆ. ಸೋಷಿಯಲ್ ಮೀಡಿಯಾದ ಈಗಿನ ಕಾಲದಲ್ಲಿ ವಿಷಯದ ಚರ್ಚೆ, ಅನಾವರಣ, ವೈಭವೀಕರಣವು ಸ್ವಲ್ಪ ಹೆಚ್ಚಾಗಿಯೇ ಜನರ ಮುಂದೆ ಬಂದು ನಿಲ್ಲುವುದರಿಂದ ಮತದಾರ ಪ್ರಭುವಿನ ಅಭಿಪ್ರಾಯ ನಿಖರವಾಗಿ ಅಂದಾಜಿಸಲಾರೆವು. ಜನರ ಆಕ್ರೋಶ, ಅಸಡ್ಡೆ, ಜಿಗುಪ್ಸೆಗಳು ಮತದಾನದಿಂದ ಅವರು ವಿಮುಖರಾಗಿ ನಿಲ್ಲುವಂತೆ ಮಾಡಿದೆ. ಆ ನಿಟ್ಟಿನಲ್ಲಿ ಒಂದು ನೋಟ 'ನೋಟಾ' (None of the above) ಸ್ಪರ್ಧಿಸಿದ ಅಭ್ಯರ್ಥಿಗಳಾರೂ ನನ್ನ ಮತಕ್ಕೆ ಅರ್ಹರಲ್ಲಾ)ದೆಡೆಗೆ. ಎಷ್ಟರ ಮಟ್ಟಿಗೆ ಅಸಂಗತವೆನ್ನುವ ಕುರಿತು ಈ ಲೇಖನ.

2009 ರಲ್ಲಿ ಕೇಂದ್ರ ಚುನಾವಣಾ ಆಯೋಗವು  ಸುಪ್ರೀಂಗೆ ನೋಟಾ ಕುರಿತು ಅರ್ಜಿ ಸಲ್ಲಿಸಿತ್ತು. ವಿಚಾರಣೆಯ ನಂತರ 2013 ಸೆಪ್ಟೆಂಬರ್ 27ರಂದು ಅದು ಜಾರಿಗೆ ಬಂದಿತು. ಸುಪ್ರಿಂ ಅನ್ವಯ 'ನೋಟಾ' ಮತದಾರರ ಸ್ವಾತಂತ್ರ್ಯತೆಯನ್ನು ಪ್ರತಿಪಾದಿಸುತ್ತದೆ ಹಾಗೂ ಗೌರವಿಸುತ್ತದೆ. ಮತ್ತು ನೋಟಾ ನಂತರ ಮರು ಚುನಾವಣೆ ಪ್ರಕ್ರಿಯೆ ಇಲ್ಲಾ ಎಂದು ಸ್ಪಷ್ಟವಾಗಿ ತಿಳಿಸಿದೆ.

ನೋಟಾದಲ್ಲಿ ಮತದಾರ ತನ್ನ ಆಕ್ರೋಶವನ್ನು ನಿರಾಕರಣೆ ಮೂಲಕ ತೋರಿಸಬಹುದು. ನೋಟಾದ ಅರ್ಥವೇ ಚುನಾವಣೆಗೆ ಸ್ಪರ್ಧಿಸಿದ ಅಭ್ಯರ್ಥಿಗಳಿಗೆ ನನ್ನ ಮತವಿಲ್ಲ ಎಂದು. ಅದಕ್ಕಾಗಿ ವಿದ್ಯುನ್ಮಾನ ಯಂತ್ರದಲ್ಲಿ ಕೊನೆಗೆ 'ನೋಟಾ' ಬಟನ್ ಇರುವುದು. ಈ ನೋಟಾದ ತೊಂದರೆಯೇನೆಂದು ನೀವು 'ಪಂಚರಾಜ್ಯಗಳ' ಚುನಾವಣಾ ಫಲಿತಾಂಶಗಳಲ್ಲಿ ಕಂಡಿರಬಹುದು. ಮತದಾನವಾದ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳಿಗೆ ಬಂದ ಮತಕ್ಕಿಂತ ಮತದಾರ ನೋಟಾವನ್ನೇ ಹೆಚ್ಚು ಚಲಾಯಿಸಿದ್ದ. ನೋಟಾದ ಸಂಖ್ಯೆಯ ಹತ್ತಿರವಿರೋ ಅಭ್ಯರ್ಥಿಗಳಿದ್ದರೋ ಅವರನ್ನೇ ವಿಜಯಿಯೆಂದು ಘೋಷಿಸಲಾಯಿತು. ಘಂಟಾಘೋಷವಾಗಿ ಅಭ್ಯರ್ಥಿಗಳೇ ಬೇಡವೆಂದು ಧಿಕ್ಕರಿಸಿದ ಬಹುಮತ ಯಾವುದೇ ಪ್ರಯೋಜನಕ್ಕೂ ಬರದಿರುವುದು ಹಲವರ ಅಸಮಾಧಾನಕ್ಕೂ ಕಾರಣವಾಗಿದ್ದು ಮತಗಟ್ಟೆಗೆ ಬಂದು ಮತ ಚಲಾಯಿಸಿದರೂ  ಒಂದೇ ಬಿಟ್ಟರೂ ಒಂದೇ ಎಂಬ ಮನೋಭಾವ ಬಂದಿದ್ದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಅತೀ ಮಾರಕ. ಮತದಾರರ ನೋಟಾ ಪ್ರಕ್ರಿಯೆಯ ಇನ್ನೊಂದು ಮುಖವೆಂದರೆ ಗೆಲ್ಲದ ಅಭ್ಯರ್ಥಿಯನ್ನೂ ಕೂಡಾ ಪರೋಕ್ಷವಾಗಿ ಅಧಿಕಾರಕ್ಕೆ ತರುವಲ್ಲಿ ಮಹತ್ವದ ಪಾತ್ರ ವಹಿಸುತ್ತಿರುವುದು. ಮಧ್ಯ ಪ್ರದೇಶದಲ್ಲಿ ಮ್ಯಾಜಿಕ್ ನಂ 116 ದಾಟದ ಪಕ್ಷಕ್ಕೆ ಗೆದ್ದ ಪಕ್ಷವೆಂದು ಘೋಷಣೆ ಮಾಡಲಾಯಿತು. ಅಲ್ಲಿ ಒಟ್ಟಾರೆ 5.4  ಮತಗಳ ಪೈಕಿ ನೋಟಾಕ್ಕೆ ಶೇ 1.4 ಪಾಲು ಸಿಕ್ಕಿತ್ತು. ಬಿ ಜೆಪಿ ಶೇ 41 , ಕಾಂಗ್ರೆಸ್ ಶೇ 40.9 , ಬಿ.ಎಸ್ ಪಿ ಹಾಗೂ ಜಿ ಜಿ ಐ ಕ್ರಮವಾಗಿ ಶೇ 5 ಹಾಗೂ 1.8 ಮತಗಳಿಸಿದ್ದು ಈ ಮ್ಯಾಜಿಕ್ ನಂ 116 ಸಂಖ್ಯೆಯು ಬಹುದೊಡ್ಡ ಫಲಿತಾಂಶ ಕೂಡ ಉಲ್ಟಾ ಪಲ್ಟಾ ಆಗಿ ಹೋಯಿತು. ರಾಜಸ್ಥಾನದಲ್ಲಿ 199 ಸ್ಥಾನಕ್ಕೆ ನಡೆದ ಚುನಾವಣೆಗೆ, ಅಧಿಕಾರ ಸ್ಥಾಪಿಸಲು 100 ಸ್ಥಾನಗಳು ಸಾಕು ಎಂದಿತ್ತು. ಇಲ್ಲಿ ನೋಟಾಕ್ಕೆ 1.3% ಮತಗಳು ಚಲಾಯಿಸಲ್ಪಟ್ಟಿದ್ದವು. ರಾಜಸ್ತಾನದ  ಚುನಾವಣಾ ಫಲಿತಾಂಶ ಮ್ಯಾಜಿಕ್ ಸಂಖ್ಯೆಯ ಜೊತೆಗೂಡಿ ಬಹುಪಾಲು ಜನಾದೇಶ ಪಡೆದ ಪಕ್ಷದ ಅಭ್ಯರ್ಥಿ ಅಲ್ಲಿ ಮಣ್ಣು ಮುಕ್ಕಿದ್ದು, ಹೊಂದಾಣಿಕೆ ಮೂಲಕ ಮ್ಯಾಜಿಕ್ ನಂಬರ್ ಗಳಿಸಿ ವಿಜಯಗೊಂಡಿದ್ದು ಇತಿಹಾಸ.

ನೋಟಾವೊಂದು ಹಲ್ಲಿಲ್ಲದ ಹಾವಿನಂತೆ. ಜನರ ನಿರಾಕರಣೆ ಅರಿತು ರಾಜಕೀಯ ಪಕ್ಷಗಳು ಅಭ್ಯರ್ಥಿಗಳ ಆಯ್ಕೆಯಲ್ಲಿ ಮುತುವರ್ಜಿ ವಹಿಸಿ ಚಾರಿತ್ರ್ಯವಂತರನ್ನೇ ಆಯ್ಕೆ ಮಾಡುತ್ತದೆ ಎನ್ನುವುದು ಕೇವಲ ಭ್ರಮೆ. ಇಲ್ಲಿ ಮತದಾರ ಅಭ್ಯರ್ಥಿಗಳ ವಿಷಯವಾಗಿ ಅಸಂತೃಪ್ತಿ ಹೊಂದಿದ್ದು ಆತನನ್ನು ಧಿಕ್ಕರಿಸುವ ಬದಲಾಗಿ ಸಿದ್ಧಾಂತಗಳು ಸರಿಯಾಗಿದ್ದು ಆ ನಿಟ್ಟಿನಲ್ಲಿ ತಮ್ಮ ನಿಲುವನ್ನು ಪ್ರತಿಪಾದಿಸುತ್ತಿರುವ ಪಕ್ಷಗಳ ಆಯ್ಕೆ ಮಾಡಿದಲ್ಲಿ ಮೇಲಿನ ಒತ್ತಡ, ಪರಿಸರದಿಂದಾದರೂ ಅಭ್ಯರ್ಥಿಗಳು ಬದಲಾಗಬಹುದು. ಕೇವಲ ಅಭ್ಯರ್ಥಿ ಒಳ್ಳೆಯವನಿದ್ದು ಪಕ್ಷದ ಸಿದ್ಧಾಂತಗಳೆಲ್ಲವೂ ವಿದ್ರೋಹಪೂರ್ಣವಾಗಿದ್ದರೆ ಅರ್ಹ ವ್ಯಕ್ತಿಗೆ ಮೇಲಿನಿಂದ ಸಿಗಬೇಕಾದ ಸಹಕಾರ, ಮಾನ್ಯತೆ ಸಿಗದೆ ಹೋಗಬಹುದು.

ಪ್ರಮುಖವಾಗಿ ಮತದಾನ ಯಾವುದೇ ಜಾತಿ, ಧರ್ಮ, ಪ್ರಲೋಭನೆಗೆ ಒಳಗಾಗದೆ ದೇಶದ ಹಿತಕಾಯುವ ಸರಿಯಾದ  ಪಕ್ಷಕ್ಕೆ  ಬಲ ತುಂಬ ಬೇಕಿದೆ. ಆ ಮೂಲಕ ಮತದಾನದೆಡೆಗಿನ ಅನಾಸಕ್ತಿ ತೊಡೆದು ಸಮಾಜದ ಆಗುಹೋಗುಗಳ ಮೌಲ್ಯಾಂಕನ ಮಾಡಿ ಅಮೂಲ್ಯ ಮತ ಚಲಾಯಿಸಬೇಕಿದೆ. ಒಂದೊಂದು ಮತವು ದೇಶಕಟ್ಟುವಲ್ಲಿ ಮಹತ್ತರ ಪಾತ್ರ ವಹಿಸುತ್ತದೆ.

ನೋಟಾವನ್ನೂ ಕೂಡ ಬಳಸಿ  ಅನರ್ಹ ವ್ಯಕ್ತಿಗಳು ಆರಿಸಿಬರುವುದನ್ನು ತಡೆದು ಇನ್ನೊಬ್ಬ ಮತದಾರರ ಅಭಿಪ್ರಾಯಕ್ಕೂ ಪರಸ್ಪರ ಗೌರವ ಕೊಡಬೇಕಿದೆ. ತಿಳಿದ ವಿದ್ಯಾವಂತರೆ ನೋಟಾದ ಸಾಧಕ ಬಾಧಕವರಿಯದೇ ಕೇವಲ ನಮ್ಮ ನಿರಾಕರಣೆಯ ಸೂಚ್ಯವದು ಎಂದು ಬಳಸಿದರೆ, ಪ್ರಯೋಜನವಿಲ್ಲ. ಈ ದೇಶ ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರವಿರುವ ತಾಣ. ಜನರು ಪ್ರತಿನಿಧಿಗಳಿಗೆ ಅಧಿಕಾರ ಕೊಟ್ಟು ಪ್ರಜೆಗಳಿಗೋಸ್ಕರ ಅವರಿರುವುದು ಎಂದು ನೆನಪಿಸಬೇಕಿದೆ. ವ್ಯವಸ್ಥೆಯ ಬದಲಾವಣೆಗೆ ನಮ್ಮ ಉದಾಸೀನತೆಯೆ ಮದ್ದಲ್ಲಾ. ಜನ ಮನಸ್ಸು ಮಾಡಿದರೆ ಯಾವಾಗ ಬೇಕಾದರೂ ಮಂತ್ರಿ ಮಹೋದಯರನ್ನು ಬದಲಾಯಿಸಬಲ್ಲರು. ವ್ಯಕ್ತಿ, ಕುಟುಂಬ, ಸಮುದಾಯ ಕೇಂದ್ರೀಕೃತ ರಾಜಕಾರಣವನ್ನು ತೊಲಗಿಸಿ ಮುಂದಾಲೋಚನೆಯ, ತರ್ಕಬದ್ಧ ಯೋಜನೆಗಳೊಂದಿಗೆ ನಮ್ಮೆದುರಿಗೆ ಬರುವ ಪಕ್ಷ ಸಿದ್ಧಾಂತಗಳಿಗೆ ಆದ್ಯತೆ ನೀಡೋಣ. ಜನರ ಅಭಿಪ್ರಾಯಗಳಿಗೆ ಮನ್ನಣೆ ಸಿಗುವ ಸರ್ಕಾರ ಬಂದರೆ ಹಲವಾರು ಯೋಜನೆ, ಕಾರ್ಯಗಳ ಅನುಷ್ಠಾನವಾದರೂ ಆದೀತು. ಮತದಾನ ಒಂದು ಕರ್ತವ್ಯ ಅದನ್ನು ಮಾರಿಕೊಳ್ಳದೇ, ವ್ಯರ್ಥ ಮಾಡದೆ ಬಳಸೋಣ. ನಿರಾಕರಣೆಯೇ ಪರಿಹಾರವಲ್ಲ. ಅದರ ದುರುಪಯೋಗದ ಸಾಧ್ಯಾಸಾಧ್ಯತೆಗಳನ್ನು ಮನಗಂಡು ಇತರರಿಗೂ ಮನಗಾಣಿಸೋಣ. ನಮ್ಮ ದೇಶದ ಭವಿಷ್ಯ ಸರಿಪಡಿಸೋ ನಿಟ್ಟಿನಲ್ಲಿ ಎಲ್ಲರ ಅಭಿಪ್ರಾಯ ಕೂಡ ಮುಖ್ಯ. ವ್ಯವಸ್ಥೆಯನ್ನು ಸರಿಪಡಿಸಲು ನಮ್ಮ ಧ್ವನಿಯಾಗಿ ಹೊರಹೊಮ್ಮಲು ಪಕ್ಷದ ಆಯ್ಕೆಗೆ ಮತದಾನವೆಂಬುದನ್ನು ಮರೆಯದಿರೋಣ. ನೋಟಾದಲ್ಲಿ ತರಬೇಕಾದ ತುರ್ತು ಬದಲಾವಣೆಯನ್ನು ಗಮನಿಸೋಣ. ಅರ್ಹರಿಗೆ ಅಧಿಕಾರ ನೀಡೋಣ.

– ಶ್ರೀಮತಿ ಸುನಿತಾ ಗಂಗಾಧರ್, ಬೆಂಗಳೂರು

MAG(3)/NPP/26/2018-19 Registered No. RNI 45459/85 Posted at Bangalore PSO Bangalore -560 026
Date of Publishing : 17-03-2019 Date of Posting 20h or 21st of every month Posted at Periodical Rate

# ಚುನಾವಣೆಯ ಹೊಸ್ತಿಲಲ್ಲಿ : ನಾನು ಶಿಕ್ಷಕ

ದೇಶದ ಭವಿಷ್ಯ ತರಗತಿಗಳ ಕೋಣೆಗಳಲ್ಲಿ ನಿರ್ಧಾರವಾಗುತ್ತದೆ ಎನ್ನುವಂತೆ ದೇಶದ ಒಟ್ಟಾರೆ ವ್ಯವಸ್ಥೆಯಲ್ಲಿ ಶಿಕ್ಷಕ ಪ್ರಮುಖ ಪಾತ್ರ ವಹಿಸುವನು. ಭಾರತ ಒಪ್ಪಿಕೊಂಡ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಯಶಸ್ವಿಗೊಳಿಸುವಲ್ಲಿ ಶಿಕ್ಷಕನ ಪಾತ್ರ ಪ್ರಮುಖವಾದದ್ದು ಎನ್ನುವುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ.

ಬೆಳೆಯುವ ಸಿರಿ ಮೊಳಕೆಯಲ್ಲಿಯೇ ನೋಡು ಎನ್ನುವಂತೆ ಮಕ್ಕಳ ದೇಶಪ್ರೇಮ, ರಾಷ್ಟ್ರಭಕ್ತಿ, ಕರುಣೆ, ವೀರತ್ವ, ಸರಳತೆ, ಸಹಬಾಳ್ವೆ ಮುಂತಾದ ಗುಣಗಳನ್ನು ಶಿಕ್ಷಕರು ಮಕ್ಕಳಿಗೆ ಬಾಲ್ಯದಲ್ಲಿಯೇ ಪರಿಣಾಮಕಾರಿಯಾಗಿ ಹೇಳಿಕೊಡುತ್ತಾರೆ. ಪ್ರಾಚೀನ ಭಾರತ ರಾಜಗುರು ಕೌಟಿಲ್ಯ ಹೇಳುವಂತೆ "ದೇಶಕಟ್ಟುವುದು ರಾಜ ಇಲ್ಲವೇ ಸೈನಿಕರಿಂದಲ್ಲ, ಅಲ್ಲಿಯ ಗುರುಗಳಿಂದ' ಎನ್ನುವ ಮಾತು ಗುರು ರಾಜಕೀಯ ವ್ಯವಸ್ಥೆಯಲ್ಲಿ ಎಷ್ಟು ಪ್ರಮುಖ ಎನ್ನುವುದನ್ನು ನಿರ್ಧರಿಸುತ್ತದೆ. ಶಿಕ್ಷಕ ರಾಜಕಾರಣಿಯಲ್ಲ. ಆದರೆ ನೂರಾರು ರಾಜಕಾರಣಿಗಳನ್ನು ತಯಾರಿಸಬಲ್ಲ ಶಕ್ತಿ ಇರುವ ವ್ಯಕ್ತಿ. ಅಮೇರಿಕಾವನ್ನು ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸಿರುವ ಜಾರ್ಜ್ ವಾಷಿಂಗ್ಟನ್ ಮತ್ತು ಇಟಲಿಯ ಏಕೀಕರಣ ರುವಾರಿಗಳಾದ ಮ್ಯಾಜಿನಿ, ಗ್ಯಾರಿಬಾಲ್ಡಿ ಮುಂತಾದವರ ಮೇಲೆ ಶಿಕ್ಷಕರ ಪ್ರಭಾವ ಅಗಾಧವಾದದ್ದು.

ಸ್ವಾತಂತ್ರ ಪೂರ್ವದಲ್ಲಿ ಸ್ವಾತಂತ್ರ ಚಳುವಳಿಯಲ್ಲಿ ಭಾಗವಹಿಸಲು ಮತ್ತು ಬ್ರಿಟಿಷರ ದುರಾಡಳಿತದಿಂದ ಮುಕ್ತಿ ಪಡೆಯುವಲ್ಲಿ ಪ್ರಮುಖ ಪಾತ್ರವಹಿಸಿರುವವರಲ್ಲಿ ಶಿಕ್ಷಕರು ಪ್ರಮುಖರು. ಸ್ವಾತಂತ್ರ್ಯೋತ್ತರದಲ್ಲಿ ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡ ನಾವುಗಳು ಅದರ ವ್ಯವಸ್ಥೆಯ ಯಶಸ್ವಿಗೆ ಶಿಕ್ಷಕರು ಮಹತ್ವ ಪಾತ್ರ ನಿರ್ವಹಿಸಬೇಕಾಗುತ್ತದೆ. ಭಾರತ ಮತ್ತೊಂದು ಸಾರ್ವತ್ರಿಕ ಚುನಾವಣೆಯನ್ನು ಎದುರಿಸಲು ಸಜ್ಜಾಗುತ್ತಿರುವ ಈ ಸಂದರ್ಭದಲ್ಲಿ ದೇಶವನ್ನು ಎಚ್ಚರಿಸುವ ಕಾರ್ಯದಲ್ಲಿ ದೇಶಕ್ಕೆ ಒಳಿತಾಗುವ ಮತದಾನದ ಯಶಸ್ಸಿಗೆ ಮತ್ತು ಭಾರತದ ಪ್ರಗತಿಯ ಮುನ್ನೋಟ ಬರೆಯಬಲ್ಲ ವ್ಯವಸ್ಥೆಯನ್ನು ರಚಿಸುವಲ್ಲಿ ಪ್ರಮುಖ ಪಾತ್ರ ವಹಿಸುವವರಲ್ಲಿ ಶಿಕ್ಷಕರು ಪ್ರಮುಖ.

ಭಾರತ ವಿಶ್ವಗುರುವಾಗಬೇಕು, ಭಾರತ ಸ್ವಾತಂತ್ರದ ನಂತರದಲ್ಲಿ ಅಂಟಿಕೊಂಡ ಅಭಿವೃದ್ಧಿಹೊಂದುತ್ತಿರುವ ದೇಶ ಎನ್ನುವ ಹಣೆಪಟ್ಟಿಯಿಂದ ಹೊರಬಂದು ಅಭಿವೃದ್ಧಿ ಹೊಂದಿದ ದೇಶ ಎಂದು ಕರೆಸಿಕೊಳ್ಳಬೇಕು ಎಂದರೆ ರಾಜಕೀಯ ವ್ಯವಸ್ಥೆಯು ಪ್ರಮುಖವಾದದ್ದು ಎನ್ನುವುದನ್ನು ತಿಳಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದು. ಭಾರತ ಕಂಡ ಅಪರೂಪ ರಾಷ್ಟ್ರಪತಿಗಳಾದ ಡಾ|| ಅಬ್ದುಲ್ ಕಲಂರಿಗೆ ಹಕ್ಕಿಯಂತೆ ಹಾರಬೇಕು ಎಂದು ಕನಸು ಕಟ್ಟಿದವರು ಮತ್ತು ಅವರು ವಿಜ್ಞಾನಿಗಳಾಗಬೇಕು ಎಂದು ಬಯಸಿದವರು ಮೊದಲು ಅವರ ಶಿಕ್ಷಕರು. ಹೀಗಾಗಿ ಒಂದು ದೇಶಕ್ಕೆ ಒಳ್ಳೆಯ ಡಾಕ್ಟರ್‌ಗಳು, ವಿಜ್ಞಾನಿಗಳು, ಇಂಜಿನಿಯರ್‌ಗಳನ್ನು ನಿರ್ಮಿಸುವ ಹಾಗೆ ಒಳ್ಳೆಯ ರಾಜಕಾರಣಿಗಳನ್ನು ನಿರ್ಮಿಸುವ ಹೊಣೆಗಾರಿಕೆ ಶಿಕ್ಷಕರ ಮೇಲಿದೆ. ಅದಕ್ಕಾಗಿಯೇ ಅಬ್ರಾಹಿಂ ಲಿಂಕನ್‌ರು "ನನ್ನ ಮಗ ಮಾತ್ರ ರಾಷ್ಟ್ರಾಧ್ಯಕ್ಷನ ಮಗನೆಂದು ಭಾವಿಸಬೇಡಿ ನಿಮ್ಮ ತರಗತಿಯಲ್ಲಿರುವ ಎಲ್ಲರೂ ಮುಂದೊಂದು ದಿನ ರಾಷ್ಟ್ರಾಧ್ಯಕ್ಷರಾಗುವವರು ಎಂದು ತಿಳಿದು ಪಾಠ ಮಾಡಿ" ಎಂದು ತನ್ನ ಮಗನ ಶಿಕ್ಷಕರಿಗೆ ಪತ್ರ ಬರೆದಿದ್ದರು.

ಈ ಮುಂಬರುವ ದಿನಗಳಲ್ಲಿ ಈ ದೇಶಕ್ಕೆ ಒಳ್ಳೆಯದನ್ನು ಮಾಡಬಲ್ಲ, ರಾಷ್ಟ್ರದ ಪ್ರಗತಿಗೆ ಸಹಕಾರಿಯಾಗಬಲ್ಲ, ದೇಶದ ಸಂಸ್ಕೃತಿ, ಪರಂಪರೆಯನ್ನು ರಕ್ಷಿಸಬಲ್ಲ, ಪ್ರಪಂಚದ ಮುಂದೆ ಭಾರತವನ್ನು ಎದ್ದು ನಿಲ್ಲಿಸಬಲ್ಲ, ರಾಷ್ಟ್ರದ ಭದ್ರತೆಗೆ ಸಹಕಾರಿಯಾಗಬಲ್ಲ, ರಾಷ್ಟ್ರ ಮೊದಲು ಎಂದು ಎದೆತಟ್ಟಿ ಹೇಳಬಲ್ಲ ರಾಜಕೀಯ ವ್ಯವಸ್ಥೆಯನ್ನು ತರುವುದು ಪ್ರಜಾಪ್ರಭುತ್ವದ ಯಶಸ್ವಿನ ಪ್ರಮುಖ ಲಕ್ಷಣ. ಸ್ವಾತಂತ್ರ ಹೋರಾಟಗಾರರಿಗೆ ಮತ್ತು ರಾಷ್ಟ್ರಪಿತ ಮಹಾತ್ಮಾಗಾಂಧಿಜೀಯವರಿಗೆ ಜೊತೆಗೆ ಪ್ರಪಂಚಕ್ಕೆ ಮಾದರಿಯಾದ ಸಂವಿಧಾನ ಬರೆಯುವಲ್ಲಿ ಪ್ರಮುಖ ಪಾತ್ರ ವಹಿಸಿದ ಡಾ|| ಬಾಬಾ ಸಾಹೇಬ ಅಂಬೇಡ್ಕರ್ ಅವರನ್ನು ಒಳಗೊಂಡಂತೆ ಪ್ರಜಾಪ್ರಭುತ್ವದ ಕನಸುಕಂಡ ಎಲ್ಲ ರಾಷ್ಟ್ರಭಕ್ತರಿಗೆ ಗೌರವ ಸಲ್ಲಿಸುವುದು, ಚುನಾವಣೆಯ ಕಾರ್ಯದಲ್ಲಿ ಭಾಗವಹಿಸಿ ಸರಿಯಾದ ವ್ಯಕ್ತಿಯನ್ನು ಮತದಾನದ ಮೂಲಕ ಆಯ್ಕೆ ಮಾಡಿದಾಗ ಮಾತ್ರ. ಅದಕ್ಕಾಗಿ ಶಿಕ್ಷಕರಾದ ನಾವುಗಳು ಮತದಾನಕ್ಕೆ ಪ್ರೇರೇಪಿಸೋಣ, ದೇಶಕಟ್ಟುವ ಕಾರ್ಯದಲ್ಲಿ ಮತ್ತು ಸುಂದರ ಭವ್ಯ ಪರಂಪರೆಯ ದೇಶದ ಉಳಿಗಾಲ ಮತ್ತು ಬೆಳವಣಿಗೆಯಲ್ಲಿ ಮತದಾನದ ಪಾತ್ರ ಪ್ರಮುಖವಾದದ್ದು ಎನ್ನುವುದನ್ನು ಶಿಕ್ಷಕರಾದ ನಾವುಗಳು ಹೇಳಬೇಕಾದ್ದು ನಮ್ಮ ಕರ್ತವ್ಯ ಅಲ್ಲವೇ?

ಚಿದಾನಂದ ಪಾಟೀಲ್
ರಾಜ್ಯ ಪ್ರಧಾನಕಾರ್ಯದರ್ಶಿ
ಕ.ರಾ.ಮಾ.ಶಿ.ಸಂ.



IF UNDELIVERED PLEASE RETURN TO SENDER

Printed By :
General Secretary,
Karnataka Rajya Madhyamika Shikshaka Sangha ®.)
Published By:
General Secretary,
Karnataka Rajya Madhyamika Shikshaka Sangha (R.)
Owned By :
Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : General Secretary, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com